# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ –02 ಸಂಚಿಕೆ – 153 | Volume - 02 Issue - 153
ಆರ್‌ಎನ್ಐ ನಂ: ಕೆಎಆರ್‌ಕೆಎಎನ್/2023/88462 | RNI No: KARKAN/2023/88462
ಕೆಎ/ಎಸ್‌ಕೆ/ಸಿಟಿಎ–874/2024–2026 | KA/SK/CTA-874/2024-2026
ಚಿತ್ರದುರ್ಗ | Chitradurga
ದಿನಾಂಕ: 04–01–2025 ಶನಿವಾರ | Date: 04-01-2025 Saturday
ಪುಟ: 4 | Page: 4
ಬೆಲೆ : ರೂ.2–00 | Price: Rs. 2-00



**ಒಳಪುಟದ ಸುದ್ದಿಗಳು**

ಶಾಸಕರ ಅನುದಾನದಲ್ಲಿ ರೂ.20 ಲಕ್ಷ ಹಿರಿಯ ನಾಗರಿಕರಿಗೆ ಮೀಸಲು **2**

ರಾಜ್ಯ ಮಟ್ಟದ ಯುವಜನೋತ್ಸವ: ಕಾಲೇಜು ವಿದ್ಯಾರ್ಥಿಗಳಿಂದ ಬೃಹತ್ ಜಾಥಾ **3**

2 ಹೊತ್ತಿನ ಊಟಕ್ಕೂ ಶ್ರಮಿಸುತ್ತಿರುವ ಜನರ ಪರವಾಗಿ ನಿಮ್ಮ ಬದ್ಧತೆ ತೋರಿಸಿ **4**



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಗ್ರಾಮೀಣ, ನಗರ ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಅರ್ಜಿ ಆಹ್ವಾನ

» **ಚಿತ್ರದುರ್ಗ**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ವಿಕಲಚೇತನರ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ 04 ತಾಲ್ಲೂಕುಗಳ 06 ಗ್ರಾಮ ಪಂಚಾಯಿತಿಗಳಲ್ಲಿ ಹಾಗೂ 01 ತಾಲ್ಲೂಕಿನ ಪುರಸಭೆಯಲ್ಲಿ ಖಾಲಿ ಇರುವ ವಿಕಲಚೇತನರ ಗ್ರಾಮೀಣ, ನಗರ ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಅರ್ಹ ವಿಕಲಚೇತನರಿಂದ ಅರ್ಜಿ ಆಹ್ವಾನಿಸಲಾಗಿದೆ. ಜ.17 ಅರ್ಜಿ ಸಲ್ಲಿಸಲು ಕೊನೆಯ ದಿನ. ಚಿತ್ರದುರ್ಗ ತಾಲ್ಲೂಕಿನ ತುರುವನೂರು, ಅನ್ನೇಹಾಳ್, ಮಠದ ಕುರುಬರಹಟ್ಟಿ ಗ್ರಾಮ ಪಂಚಾಯಿತಿ, ಚಳ್ಳಕೆರೆ ತಾಲ್ಲೂಕಿನ ಗೌರಸಮುದ್ರ ಗ್ರಾಮ ಪಂಚಾಯಿತಿ, ಹಿರಿಯೂರು ತಾಲ್ಲೂಕಿನ ಸೂರಗೊಂಡನಹಳ್ಳಿ ಗ್ರಾಮ ಪಂಚಾಯಿತಿ, ಹೊಸದುರ್ಗ ತಾಲ್ಲೂಕಿನ ಜಾನಕಲ್ಲು ಗ್ರಾಮ ಪಂಚಾಯಿತಿಯಲ್ಲಿ ಗಾಮೀಣ ಪುನರ್ವಸತಿ ಕಾರ್ಯಕರ್ತರು (ವಿಆರ್‌ಡಬ್ಲ್ಯೂ) ಹುದ್ದೆಗೆ ಹಾಗೂ ಹೊಳಲ್ಕೆರೆ ಪುರಸಭೆ (ವಾರ್ಡ್ ನಂ.01 ರಿಂದ 17 )ಯಲ್ಲಿ ಖಾಲಿ ಇರುವ ನಗರ ಪುನರ್ವಸತಿ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದ್ದು, ಮಾಸಿಕ ರೂ.9000/–ಗಳ ಗೌರವಧನ ಆಧಾರದ ಮೇಲೆ ಕೆಲಸ ಮಾಡಲು ಆಸಕ್ತರಿರುವ ಆಯಾ ಗ್ರಾಮ ಪಂಚಾಯಿತಿ, ಆಯಾ ನಗರ ವ್ಯಾಪ್ತಿಯ 18 ರಿಂದ 45 ವರ್ಷ ವಯೋಮಾನದ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅರ್ಹ ವಿಕಲಚೇತನರು ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ದೂರವಾಣಿ ಸಂಖ್ಯೆ 08194–235284 ಗೆ ಸಂಪರ್ಕಿಸಬಹುದು ಹಾಗೂ ಆಯಾ ತಾಲ್ಲೂಕು ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಸಂಪರ್ಕಿಸಿ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ತಾಲ್ಲೂಕು ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಲ್ಲಿ ಸಲ್ಲಿಸಬೇಕು.

### ಆಕ್ಷೇಪಣೆಗೆ ಅರ್ಜಿ ಆಹ್ವಾನ

» **ಚಿತ್ರದುರ್ಗ**

ಕಾರ್ಯನಿರ್ವಹಿಸದೆ ಸ್ಥಗಿತಗೊಂಡಿರುವ ಚಿತ್ರದುರ್ಗದ ಗ್ರೇಟ್ ಫೋರ್ಟ್ ಅಲ್ಪಸಂಖ್ಯಾತರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘವನ್ನು, ಸಹಕಾರಿ ಅಧಿನಿಯಮ ಹಾಗೂ ಉಪನಿಯಮಗಳಂತೆ ಸಮಾಪನೆಗೊಳಿಸಲು, ರಾಜ್ಯ ಸೌಹಾರ್ದ ಸಂಯುಕ್ತ ವ್ಯವಸ್ಥಾಪಕ ನಿರ್ದೇಶಕರು ಸಮಾಪನಾಧಿಕಾರಿ ನೇಮಿಸಲು ತೀರ್ಮಾನಿಸಿದ್ದಾರೆ.

### ಸಹಕಾರ ಸಂಘಚುನಾವಣೆ: 12 ನಿರ್ದೇಶಕರು ಆಯ್ಕೆ

» **ಚಳ್ಳಕೆರೆ**

ತಾಲ್ಲೂಕಿನ ದೊಡ್ಡ ಉಳ್ಳಾರ್ತಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನೂತನ ನಿರ್ದೇಶಕ ಆಯ್ಕೆಗಾಗಿ ಚುನಾವಣೆ ನಡೆದಿದ್ದು, ಒಟ್ಟು 12 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ತಿಳಿಸಿದ್ದಾರೆ. ನೂತನವಾಗಿ ಜಿ.ಮೈಲಪ್ಪ, ಗುರುಪ್ಪರೆಡ್ಡಿ, ಎಲ್.ರುದ್ರಮುನಿಯಪ್ಪ, ಎಂ.ಆರ್.ಶ್ರೀನಿವಾಸ್‌ರೆಡ್ಡಿ, ಡಿ.ಭೀಮಪ್ಪ, ಟಿ.ರುದ್ರಮುನಿ, ವಿ.ನರಸಿಂಹಪ್ಪ, ಎಚ್.ದೀಪಾ, ಸಿದ್ದಮ್ಮ, ಆರ್.ಮಂಜುಳಾ, ಮತ್ತು ಸಾಲಗಾರರಲ್ಲದ ಕ್ಷೇತ್ರಕ್ಕೆ ಆರ್.ದೊಡ್ಡರಂಗಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಗಳು ಘೋಷಿಸಿದ್ದಾರೆ.

### ಬ್ಯಾಂಕಿಂಗ್ ನೇಮಕಾತಿ ಪರೀಕ್ಷೆಗಳಿಗೆ ತರಬೇತಿ

» **ಚಿತ್ರದುರ್ಗ**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಎಸ್‌ಬಿಐ ಮತ್ತು ಇತರೆ ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿ ನೀಡಲು ನಿರ್ಧರಿಸಿದೆ. ಆಸಕ್ತರು ಇದೇ ಜ.08ರೊಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು 0821–2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಕುಲಸಚಿವ ಪ್ರೊ.ಪ್ರವೀಣ ತಿಳಿಸಿದ್ದಾರೆ.

# 2022ರಲ್ಲಿ ವಿವಿಎಸ್‌ನಿಂದ ಅನುಭವಿಸಿದ ಸಂಕಟ ಮರುಕಳಿದಂತೆ ಎಚ್ಚರವಹಿಸಿ

## 2 ವರ್ಷದ ಹಿಂದೆ 135ಅಡಿ ದಾಖಲೆ ಪ್ರಮಾಣದಲ್ಲಿ ನೀರು ಸಂಗ್ರಹ । ನೂರಾರು ಎಕರೆ ಜಮೀನುಗಳು ನೀರಿನಲ್ಲಿ ಮುಳುಗಿ ಸಂಕಟ ಪಟ್ಟಿದ್ದ ರೈತರು

» **ಪಿ.ಟಿ.ಸಿದ್ಧೇಶ್ ಲಕ್ಕಿಹಳ್ಳಿ**



ನಮ್ಮಜನ ವಿಶೇಷ

ಹೊಸದುರ್ಗ: ಮಧ್ಯಕರ್ನಾಟಕದ ಜಲಾಪಾತ್ರೆ ಎಂದೇ ಖ್ಯಾತಿ ಪಡೆದಿರುವ ವಾಣಿವಿಲಾಸಸಾಗರ ಜಲಾಶಯ ಮತ್ತೊಮ್ಮೆ ಕೋಡಿ ಬೀಳಲು ದಿನಗಣನೆ ಶುರುವಾಗಿದೆ. ಪ್ರಸ್ತುತ ಜಲಾಶಯದ ನೀರಿನ ಮಟ್ಟ 129.65 ಅಡಿ ಸಂಗ್ರಹವಾಗಿದ್ದು, ಇನ್ನೂ 5 ಇಂಚು ನೀರು ಬಂದರೆ, ನೀರಿನ ಮಟ್ಟ 130 ಅಡಿಗೆ ತಲುಪಲಿದೆ. ಇದರಿಂದಾಗಿ ಡ್ಯಾಂ ಭರ್ತಿಯಾಗಿ ಮೈದುಂಬಿ ಹರಿಯುವ ಸಾಧ್ಯತೆ ಬಹಳ ದಟ್ಟವಾಗಿದೆ.

ಜಲಾಶಯ ಭರ್ತಿಯಾಗುತ್ತಿರುವುದು ಒಂದೆಡೆ ರೈತರಿಗೆ ಸಂತಸ ನೀಡಿದರೆ, ಹಿನೀರಿನ ಭಾಗದ ರೈತರು ಸಂಕಟ ಅನುಭವಿಸುವ ಪರಿಸ್ಥಿತಿ ಎದುರಾಗಿದೆ. ಕಳೆದ 2 ವರ್ಷಗಳ ಹಿಂದೆ (2022) ಅತಿವೃಷ್ಟಿಯಿಂದಾಗಿ ಚಿಕ್ಕಮಗಳೂರು ಜಿಲ್ಲೆ ಮತ್ತು ಹೊಸದುರ್ಗ ತಾಲೂಕಿನಾದ್ಯಂತ ಸುರಿದ ಭಾರಿ ಮಳೆಯಿಂದ ಜಲಾಶಯಕ್ಕೆ ಅಧಿಕ ಪ್ರಮಾಣದ ನೀರು ಹರಿದು ಬಂದಿತ್ತು. ಇದರಿಂದಾಗಿ ಡ್ಯಾಂ 2 ನೇ ಬಾರಿಗೆ ಕೋಡಿ ಬಿದ್ದು, ಕೋಡಿಯ ಮೇಲ್ಭಾಗ ಸತತ 3 ತಿಂಗಳುಗಳ ಕಾಲ 5 ಅಡಿ ನೀರು ಹರಿದು ಐತಿಹಾಸಿಕ ದಾಖಲೆ ನಿರ್ಮಾಣವಾಗಿತ್ತು. ಅದರಂತೆಯೇ, ಈ ವರ್ಷವೂ ಜಲಾಶಯಕ್ಕೆ ಅಧಿಕ ಪ್ರಮಾಣದ ನೀರು ಹರಿದು ಬರುತ್ತಿದೆ. ಡ್ಯಾಂ ಮೈದುಂಬಿ ಹರಿಯಲು ದಿನಗಣನೆ ಆರಂಭವಾಗಿದ್ದು ಜಲಾಶಯಕ್ಕೆ ನಿತ್ಯವೂ 600 ರಿಂದ 700 ಕ್ಯೂಸೆಕ್ ನೀರಿನ ಒಳ ಹರಿವು ಬರುತ್ತಿದೆ.

ಈಗಾಗಲೇ, ಜಲಾಶಯದಲ್ಲಿ ನೀರಿನ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಬೇವಿನಹಳ್ಳಿಯಿಂದ ಪೂಜಾರಹಟ್ಟಿ, ಎಂ.ಮಲ್ಲಾಪುರ, ಗಡಿಯಪ್ಪನಹಟ್ಟಿ, ಬಂಟನಗವಿ, ಮಾಳಿಗೆಹಟ್ಟಿ ಮತ್ತು ರಾಮಜ್ಜನಹಳ್ಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಹಿನ್ನೀರಿಗೆ ಸಂಪೂರ್ಣವಾಗಿ ಮುಳುಗಡೆಯಾಗುತ್ತಿದ್ದು, ಜನರು ಸಂಚಾರ ನಡೆಸಲು ಪರದಾಟ ನಡೆಸುವಂತಾಗಿದೆ. ಅಲ್ಲದೇ, ಖಾತೆ ಜಮೀನುಗಳಿಗೂ ನೀರು ನುಗ್ಗುತ್ತಿದ್ದು, ತೆಂಗಿನ ತೋಟಗಳು, ಅಡಕೆ ತೋಟಗಳು, ಬಾಳೆ ತೋಟಗಳು ಹಾಗೂ ಇನ್ನಿತರ ಬೆಳೆಗಳು ನೀರಿನಲ್ಲಿ ಮುಳುಗಿ ನಾಶವಾಗುವ ಆತಂಕ ರೈತರಿಗೆ ಎದುರಾಗಿದೆ.

ಅಧಿಕಾರಿಗಳು ಮತ್ತು ಸಾರ್ವಜನಿಕರ ನಿರೀಕ್ಷೆಗೂ ಮೀರಿ 2022 ರಲ್ಲಿ ಡ್ಯಾಂ ಗೆ 135 ಅಡಿ ನೀರು ಹರಿದು ಬಂದಿತ್ತು. ಇದರಿಂದಾಗಿ, ಪೂಜಾರಹಟ್ಟಿ ಹಾಗೂ ಇನ್ನಿತರ ಕೆಲ ಗ್ರಾಮಗಳ ಮನೆಗಳು ಮುಳುಗಡೆಯಾಗಿದ್ದರ ಪರಿಣಾಮ ಮನೆ ಕಳೆದುಕೊಂಡ ಜನರು ಗಂಜಿ ಕೇಂದ್ರದಲ್ಲಿ ಇರಬೇಕಾದ ಸ್ಥಿತಿ ನಿರ್ಮಾಣವಾಗಿತ್ತು. ತಾಲೂಕು ಆಡಳಿತ ಹಿನ್ನೀರಿನ ಗ್ರಾಮಗಳ ಜನರಿಗೆ ಸರಿಯಾಗಿ ಮಾಹಿತಿ ನೀಡದೆ ಇದ್ದಿದ್ದು, ಸರಿಯಾದ ರೀತಿಯಲ್ಲಿ ಮುಂಜಾಗ್ರತಾ ಕ್ರಮ ವಹಿಸಿಕೊಳ್ಳದೆ ಇದ್ದುದ್ದರಿಂದ ಸಂಕಷ್ಟದ ಪರಿಸ್ಥಿತಿ ಎದುರಿಸ ಬೇಕಾಯಿತು. ಮತ್ತೊಮ್ಮೆ ಇದೀಗ, ಜಲಾಶಯಕ್ಕೆ ಅಧಿಕ ಪ್ರಮಾಣದ ನೀರು ಹರಿದು ಬರುತ್ತಿದ್ದು, 2022 ರಲ್ಲಿ ಆದ ಪರಿಸ್ಥಿತಿ ನಿರ್ಮಾಣವಾಗದಂತೆ ತಡೆಯಲು ತಾಲೂಕು ಆಡಳಿತ ಮತ್ತು ಜಿಲ್ಲಾಡಳಿತ ಸೂಕ್ತ ಮುಂಜಾಗ್ರತಾಕ್ರಮ ವಹಿಸಬೇಕಿದೆ ಎಂದು ಎಂ. ಮಲ್ಲಾಪುರ ಗ್ರಾಮದ ಜನರು ಒತ್ತಾಯಿಸಿದ್ದಾರೆ.

> ಈ ವರ್ಷವೂ ಜಲಾಶಯ ಕೋಡಿ ಬಿದ್ದರೆ, ನಮ್ಮ ಜೀವಿತ ಅವಧಿಯಲ್ಲಿ 2 ಬಾರಿ ಡ್ಯಾಂ ಭರ್ತಿಯಾಗಿದ್ದನ್ನು ನೋಡುತ್ತೇವೆ. ಜಲಾಶಯ ಭರ್ತಿಯಾಗುತ್ತಿರುವುದು ಒಂದೆಡೆ ಸಂತಸ ನೀಡಿದರೆ, ನಮ್ಮ ಗ್ರಾಮ ಹಿನ್ನೀರಿನ ಸಮೀಪವಿದ್ದು, ಹೆಚ್ಚು ನೀರು ಸಂಗ್ರಹವಾದರೆ, ಮನೆಗಳನ್ನು ಕಳೆದುಕೊಳ್ಳುವ ಭೀತಿ ಎದುರಾಗಿದೆ. 3 ವರ್ಷಗಳ ಹಿಂದೆ ಗ್ರಾಮದ ರೈತರ ಬಹಳಷ್ಟು ಜಮೀನುಗಳು ಹಿನ್ನೀರಿಗೆ ಮುಳುಗಿ ಕಷ್ಟ ಅನುಭವಿಸುವಂತಾಗಿತ್ತು. ಇದೀಗ, ನಮ್ಮೂರಿನಿಂದ ಬೇವಿನಹಳ್ಳಿ ಮತ್ತು ಪೂಜರಹಟ್ಟಿ ಗ್ರಾಮಗಳಿಗೆ ತೆರಳುವ ಸಂಪರ್ಕ ರಸ್ತೆ ಮುಳುಗಡೆಯಾಗಿದ್ದು, 12 ರಿಂದ 15 ಕಿ.ಮೀ ಸುತ್ತಿಕೊಂಡು ಓಡಾಟ ನಡೆಸಬೇಕಿದೆ. ತಾಲೂಕು ಆಡಳಿತ ಮಂಜಾಗ್ರತಾವಹಿಸಿ ಹಿನ್ನೀರಿನ ಗ್ರಾಮಗಳ ಜನರಿಗೆ ಸರಿಯಾದ ಸಮಯಕ್ಕೆ ಮಾಹಿತಿ ನೀಡಿದರೆ, ಜನರು ಸುರಕ್ಷಿತವಾಗಿರಲು ಅನುಕೂಲವಾಗುತ್ತದೆ.
>
> » **ಹೆಚ್.ನರಸಿಂಹಪ್ಪ, ಹಿರಿಯ ಮುಖಂಡರು, ಎಂ.ಮಲ್ಲಾಪುರ.**

> ವಿವಿಸಾಗರ ಜಲಾಶಯದ ನೀರಿನ ಮಟ್ಟ 129.60 ಅಡಿಗೆ ತಲುಪಿದ್ದು, ಮತ್ತೊಮ್ಮೆ ಕೋಡಿ ಬೀಳುವ ದಿನ ಸಮೀಪಿಸಿದೆ. ಈಗಾಗಲೇ, ಜಲಾಶಯದ ಹಿನ್ನೀರಿನ ಗ್ರಾಮಗಳಿಗೆ ಭೇಟಿ ನೀಡಿ, ಜನರ ಸಮಸ್ಯೆಗಳನ್ನು ಕೇಳಲಾಗಿದೆ. ಗ್ರಾಮಾಡಳಿತಾಧಿಕಾರಿಗಳು ಮತ್ತು ರಾಜಸ್ವ ನಿರೀಕ್ಷಕರು ನಿತ್ಯವೂ ಮಾಹಿತಿ ನೀಡುತ್ತಿದ್ದಾರೆ. ಹಿನ್ನೀರಿನ ಗ್ರಾಮಗಳ ಜನರಿಗೆ ಜಲಾಶಯದಿಂದ ಯಾವುದೇ ತೊಂದರೆ ಬಾರದಂತೆ, ಸಮಯಕ್ಕೆ ಸರಿಯಾಗಿ ಮಾಹಿತಿ ನೀಡಲಾಗುವುದು.
>
> » **ತಿರುಪತಿ ಪಾಟೀಲ್. ತಹಶೀಲ್ದಾರರು, ಹೊಸದುರ್ಗ**

## ರಸ್ತೆ ಮಧ್ಯ ಕಡಪಕಲ್ಲು ಟ್ರ್ಯಾಕ್ಟರ್ ಪಲ್ಟಿ: ಓರ್ವ ವ್ಯಕ್ತಿ ಸಾವು

» **ಚಳ್ಳಕೆರೆ**

ತಾಲ್ಲೂಕಿನ ತಳಕು ಪೊಲೀಸ್ ಠಾಣಾ ವ್ಯಾಪ್ತಿಯ ಮೈಲನಹಳ್ಳಿ–ರೇಣುಕಾಪುರ ರಸ್ತೆಯ ಜವಾನಸಿದ್ದಪ್ಪನವರ ಜಮೀನು ಬಳಿ ಕಡಪಕಲ್ಲು ತುಂಬಿದ ಟ್ರ್ಯಾಕ್ಟರ್‌ನ ಮುಂಬಾಗದ ಟಯರ್ ಒಡೆದ ಪರಿಣಾಮ ಟ್ರ್ಯಾಕ್ಟರ್‌ಪಲ್ಟಿಯಾಗಿ ಕೂಲಿಕೆಲಸಕ್ಕೆ ತೆರಳಿದ್ದ ರೇಣುಕಾಪುರ ಗ್ರಾಮದ ಎನ್.ಶಂಕರಪ್ಪ(37) ಸ್ಥಳದಲ್ಲೇ ಮೃತಪಟ್ಟಿರುತ್ತಾನೆ. ಆಂಧ್ರಮೂಲಕ ಟ್ರ್ಯಾಕ್ಟರ್ ಕಡಪಕಲ್ಲುಗಳನ್ನು ಪ್ರತಿನಿತ್ಯ ಸುತ್ತಮುತ್ತಲ ಗ್ರಾಮಗಳಿಗೆ ವಿತರಣೆ ಮಾಡುತ್ತಿದ್ದು, ಜವಾನ್‌ಸಿದ್ದಪ್ಪನವರ ಜಮೀನುಗಳಿ ಟ್ರ್ಯಾಕ್ಟರ್ ಶುಕ್ರವಾರ ಬೆಳಗ್ಗೆ ಆಗಮಿಸಿದ ಸಂದರ್ಭ ಈ ಅವಘಡ ಸಂಭವಿಸಿದೆ.ಅಪಘಾತದಲ್ಲಿಎನ್.ಶಂಕರಪ್ಪ ಮೃತಪಟ್ಟರೆ, ಆಂಧ್ರಪ್ರದೇಶದ ಕನಕಾನಪಲ್ಲಿಯ ರಮೇಶ್(ಚಾಲಕ), ಶಿವಶಂಕರ ಗಾಯಗೊಂಡು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ನಡೆದ ಸ್ಥಳಕ್ಕೆ ತಳಕು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪಿಎಸ್‌ಐ ಲೋಕೇಶ್ ಪ್ರಕರಣ ದಾಖಲಿಸಿ ತನಿಖೆ ಮುಂದುವರೆಸಿದ್ದಾರೆ.



**ಪ್ರಮುಖ ಸುದ್ದಿ**

# ಸಾರ್ವಜನಿಕರ ಅನುಕೂಲಕ್ಕೆ ತಕ್ಕಂತೆ ಕ್ಷೇತ್ರದಾದ್ಯಂತ ರಸ್ತೆಗಳ ಅಗಲೀಕರಣ, ಮರುಡಾಂಬರೀಕರಣ ಕಾಮಗಾರಿ ಅನುಷ್ಠಾನ





» **ಚಳ್ಳಕೆರೆ**

ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿಪರ್ವ ಆರಂಭವಾಗಿದ್ದು, ಪ್ರಸ್ತುತ ರಾಜ್ಯ ಸರ್ಕಾರ ಗ್ರಾಮೀಣ ಭಾಗಗಳ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡುತ್ತಿದೆ. ಜನರ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿ ಕಾಮಗಾರಿ ಅನುಷ್ಠಾನಗೊಳಿಸಲಾಗುತ್ತಿದೆ. ಸಾರ್ವಜನಿಕರಿಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಬದ್ಧವಾಗಿದೆ ಎಂದು ಕ್ಷೇತ್ರದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ಧಿಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು. ಅವರು, ಕ್ಷೇತ್ರ ವ್ಯಾಪ್ತಿಯ ಪರಶುರಾಮಪುರ ಮತ್ತು ಸಿದ್ದೇಶ್ವರದುರ್ಗ ಗ್ರಾಮದಲ್ಲಿ ಮರುಟೆಂಡರ್ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಪ್ರಾರಂಭದ ಹಂತದಲ್ಲಿ ಕುಮುಟ ಕಡುಮಡಗಿಯ ರಾಷ್ಟ್ರೀಯ ಹೆದ್ದಾರಿ ಸಿದ್ದೇಶ್ವರನದುರ್ಗ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಿಆರ್‌ಎಫ್ ಯೋಜನೆಯಡಿ ಸುಮಾರು 5ಕೋಟಿ ವೆಚ್ಚದಲ್ಲಿ ಮರು ಡಾಂಬರೀಕರಣ ಮತ್ತು ಪರಶುರಾಮಪುರ ಪ್ರಾಧಿಕಾರದ ಅಪೆಂಡಿಕ್ಸ್–ಸಿ ಯೋಜನೆಯಡಿ 6ಕೋಟಿ ವೆಚ್ಚದಲ್ಲಿ ರಸ್ತೆ ಅಗಲೀಕರಣ ಕಾಮಗಾರಿಗೆ ಚಾಲನೆ ನೀಡಿದರು. ಮುಂದಿನ ದಿನಗಳಲ್ಲೂ ಕ್ಷೇತ್ರದಾದ್ಯಂತ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವ ಭರವಸೆ ನೀಡಿದರು.

ಜಿಲ್ಲಾ ಗ್ಯಾರಂಟಿ ಸಮಿತಿ ಸದಸ್ಯ ಚನ್ನಕೇಶವ, ಕೆಡಿಪಿ ಸದಸ್ಯ ಬಸವರಾಜು, ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಆರ್. ರುದ್ರೇಶ್, ಮುಖಂಡರಾದ ಹನುಮಂತಪ್ಪ, ಬಿ.ಟಿ.ರಮೇಶ್‌ಗೌಡ, ನಾಗಭೂಷನ್, ಬಿ.ಕೆ. ಗುಜ್ಜಾರಪ್ಪ, ಕೃಷ್ಣಪ್ಪ, ಬಸವರಾಜು, ಬಾಬು ಮುಂತಾದವರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಕರೇಕಲ್ ಆಂಜನೇಯಸ್ವಾಮಿ ಧರ್ನುಮಾಸದ ಪೂಜೆ : ಶಾಸಕ ಟಿ.ರಘುಮೂರ್ತಿ

» **ಚಳ್ಳಕೆರೆ**

ನಗರದ ನಾಯಕನಹಟ್ಟಿ ರಸ್ತೆಯ ಶ್ರೀಕರೇಕಲ್ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶನಿವಾರ ನಡೆಯುವ ಧರ್ನುಮಾಸದ ವಿಶೇಷ ಪೂಜೆಯಲ್ಲಿ ಶಾಸಕ ಟಿ.ರಘುಮೂರ್ತಿ ಪಾಲ್ಗೊಳ್ಳುವರು ಎಂದು ದೇವಸ್ಥಾನದ ಆರ್ಚಕ ಸಿ.ಎನ್.ನಾಗಶಯನಗೌತಮ್ ತಿಳಿಸಿದ್ದಾರೆ. ಅವರು, ಈ ಬಗ್ಗೆ ಮಾಹಿತಿ ನೀಡಿ, ಪ್ರತಿವರ್ಷದ ಧರ್ನುಮಾಸದಲ್ಲಿ ಜನರ ಕಲ್ಯಾಣಕ್ಕಾಗಿ ಶ್ರೀಆಂಜನೇಯಸ್ವಾಮಿಯನ್ನು ವಿಶೇಷ ಅಲಂಕಾರ, ಪೂಜೆಗಳಿಂದ ಪ್ರಾರ್ಥಿಸಲಾಗುವುದು. ಹೆಚ್ಚಿನ ಸಂಖ್ಯೆಯ ಭಕ್ತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ಶಾಸಕರಿಗೂ ಸಹ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿದ್ದು, ಅವರೂ ಸಹ ಪೂಜಾ ಕಾರ್ಯದಲ್ಲಿ ಪಾಲ್ಗೊಳ್ಳುವರು ಎಂದು ತಿಳಿಸಿದ್ದಾರೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀಸ್ವಾಮಿಯ ದರ್ಶನ ಪಡೆದು ಪ್ರಸಾದಸ್ವೀಕರಿಸುವಂತೆ ಗೌತಮ್ ಮನವಿ ಮಾಡಿದ್ದಾರೆ.

### ಪತ್ರಿಕಾ ಕಚೇರಿಗಳಲ್ಲಿ ಇಂಟರ್ನ್‌ಷಿಪ್ ಯೋಜನೆ: ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

» **ಚಿತ್ರದುರ್ಗ**

ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಮಹಿಳಾ ಅಭ್ಯರ್ಥಿಗಳಿಂದ ವಿವಿಧ ಪತ್ರಿಕಾಲಯಗಳಲ್ಲಿ ತರಬೇತಿ ಪಡೆಯಲು ಅರ್ಜಿ ಆಹ್ವಾನಿಸಿದೆ. ಒಟ್ಟು ಐವರು ಮಹಿಳಾ ಅಭ್ಯರ್ಥಿಗಳಿಗೆ ಅವಕಾಶವಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ಎರಡು ತಿಂಗಳ ಅವಧಿಗೆ ವಿವಿಧ ಪತ್ರಿಕಾ ಕಚೇರಿಗಳಲ್ಲಿ ತರಬೇತಿ ಪಡೆಯಲು ಅವಕಾಶ ಕಲ್ಪಿಸಲಾಗುವುದು. ತರಬೇತಿ ಅವಧಿಯಲ್ಲಿ ಮಾಸಿಕ 20,000 ರೂ. ಶಿಷ್ಯವೇತನ ನೀಡಲಾಗುವುದು. ಅಭ್ಯರ್ಥಿಗಳು ರಾಜ್ಯದ ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿರಬೇಕು. ವಯಸ್ಸು 28 ವರ್ಷ ಮೀರಿರಬಾರದು. ಅರ್ಹತಾ ಪರೀಕ್ಷೆಯ ಮೂಲಕ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು. ಆಸಕ್ತ ಅಭ್ಯರ್ಥಿಗಳು ಜನವರಿ 20 ರ ಒಳಗಾಗಿ ತಮ್ಮ ಸ್ವವಿವರ, ದೂರವಾಣಿ ಸಂಖ್ಯೆ, ಇ-ಮೇಲ್ ವಿಳಾಸ, ಆರ್ಥಿಕ ಸ್ಥಿತಿ, ಅಂಕಪಟ್ಟಿಗಳ ಮಾಹಿತಿಯನ್ನು ಸ್ಕ್ಯಾನ್ ಮಾಡಿ karnatakamediaacademy@gmail.com ಗೆ ಇ-ಮೇಲ್ ಮೂಲಕ ಕಳುಹಿಸಬಹುದಾಗಿದೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

### ಜನವರಿ 5 ರಂದು ದಾವಣಗೆರೆಗೆ ಮುಖ್ಯಮಂತ್ರಿಗಳ ಪ್ರವಾಸ

» **ದಾವಣಗೆರೆ**

ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಜನವರಿ 5 ರಂದು ಬೆಳಗ್ಗೆ 11 ಗಂಟೆಗೆ ಹೆಲಿಕ್ಯಾಪ್ಟರ್ ಮೂಲಕ ದಾವಣಗೆರೆ ಬಾಪೂಜಿ ಎಂಬಿಎ ಮೈದಾನಕ್ಕೆ ಆಗಮಿಸುವರು. ನಂತರ ಬೆಳಗ್ಗೆ 11.30 ಕ್ಕೆ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಿಂದ ಎಂಬಿಎ ಮೈದಾನದಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ಯುವಜನೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 1 ಗಂಟೆಗೆ ಹೈಸ್ಕೂಲ್ ಮೈದಾನದಲ್ಲಿ ದಾವಣಗೆರೆ ಕುರುಬ ಸಮಾಜ ಹಾಗೂ ಅಭಿಮಾನಿ ಬಳಗದಿಂದ ಆಯೋಜಿಸಿರುವ 537 ನೇ ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಸಂಜೆ 4 ಗಂಟೆಗೆ ಹೆಲಿಕ್ಯಾಪ್ಟರ್ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

### ಗ್ರಾಪಂ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರುಗಳ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

» **ದಾವಣಗೆರೆ**

ದಾವಣಗೆರೆ ಜಿಲ್ಲೆಯಲ್ಲಿನ 14 ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ 14 ಮೇಲ್ವಿಚಾರಕರುಗಳ ಅರ್ಹ ಅಭ್ಯರ್ಥಿಗಳನ್ನು ಮೀಸಲಾತಿ ಮತ್ತು ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. ಆಯ್ಕೆ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್ davanagere.nic.in ನಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು 15 ದಿನಗಳು ಮಾತ್ರ ಅವಕಾಶ ನೀಡಲಾಗಿದೆ. ನಿಗದಿತ ಕಾಲಮಿತಿಯೊಳಗೆ ಪೂರಕ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಸಲ್ಲಿಸಬೇಕು ಎಂದು ಜಿಲ್ಲಾ ಪಂಚಾಯತ್‌ಮುಖ್ಯಕಾರ್ಯನಿರ್ವಾಹಣಾಧಿಕಾರಿ ಡಾ; ಸುರೇಶ್ ಬಿ.ಇಟ್ನಾಳ್ ತಿಳಿಸಿದ್ದಾರೆ.

---

ಹಿರಿಯ ನಾಗರಿಕರಿಗೆ "ಉಚಿತ ನೇತ್ರ ತಪಾಸಣಾ ಶಿಬಿರ"ದಲ್ಲಿ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಹೇಳಿಕೆ

# ಶಾಸಕರ ಅನುದಾನದಲ್ಲಿ ರೂ.20 ಲಕ್ಷ ಹಿರಿಯ ನಾಗರಿಕರಿಗೆ ಮೀಸಲು

» **ಚಿತ್ರದುರ್ಗ**

ಶಾಸಕರ ಅನುದಾನದಲ್ಲಿ ರೂ.20 ಲಕ್ಷ ಹಿರಿಯ ನಾಗರಿಕರಿಗಾಗಿಯೇ ಮೀಸಲು ಇರಿಸಿರುವುದಾಗಿ ಶಾಸಕ ಕೆ.ಸಿ.ವಿರೇಂದ್ರ ಪಪ್ಪಿ ಹೇಳಿದರು.

ನಗರದ ಜಿಲ್ಲಾ ಬಾಲಭವನಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಆರೋಗ್ಯ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದ ವತಿಯಿಂದ ಹಮ್ಮಿಕೊಂಡಿದ್ದ ಹಿರಿಯ ನಾಗರಿಕರಿಗೆ ಉಚಿತ ನೇತ್ರ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಪ್ರತಿ ಯಶಸ್ವಿ ವ್ಯಕ್ತಿಗಳ ಹಿಂದೆ ಅವರ ಪೋಷಕರ ತ್ಯಾಗ ಇದೆ. ಮಕ್ಕಳ ಏಳಿಗೆಗಾಗಿ ಪೋಷಕರು ಯೌವ್ವನವನ್ನು ಮುಡುಪಾಗಿಡುತ್ತಾರೆ. ಆದರೆ ಬೆಳೆದು ದೊಡ್ಡವರಾದ ಮಕ್ಕಳು ವಯಸ್ಸಾದ ಪೋಷಕರನ್ನು ಎಷ್ಟರಮಟ್ಟಿಗೆ ನೋಡಿಕೊಳ್ಳುತ್ತಾರೆ ಎನ್ನುವುದು ಇಂದಿನ ಸಮಾಜದಲ್ಲಿ ಯಕ್ಷ ಪ್ರಶ್ನೆಯಾಗಿದೆ. ಹಿರಿಯ ನಾಗರಿಕರ ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ಉತ್ತಮವಾಗಿರಬೇಕು ಎಂದರು.ಈ ದೃಷ್ಟಿಯಿಂದ ರಾಜ್ಯ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿ ಮಾಡಿದೆ. ಪ್ರತಿ ಜಿಲ್ಲೆಯಲ್ಲಿ 3 ವೃದ್ಧಾಶ್ರಮಗಳನ್ನು ಸ್ಥಾಪಿಸಲಾಗಿದೆ. ಹಿರಿಯರಿಗಾಗಿ 1090 ಸಹಾಯವಾಣಿ ತೆರಯಲಾಗಿದೆ. ಆರೋಗ್ಯ ಸಮಸ್ಯೆ ಹಾಗೂ ಕಾನೂನು ನೆರವು, ಆಪ್ತ ಸಮಾಲೋಚನೆ ಪಡೆಯಲು ಹಿರಿಯ ನಾಗರಿಕರು ಸಹಾಯವಾಣಿಗೆ ಕರೆ ಮಾಡಬಹುದಾಗಿದೆ ಎಂದು ತಿಳಿಸಿದರು. ಕೆ.ಎಸ್.ಆರ್.ಟಿ. ಬಸ್ ಪ್ರಯಾಣ ದರದಲ್ಲೂ ಹಿರಿಯ ನಾಗರಿಕರಿಗೆ ರಿಯಾಯಿತಿ ನೀಡಲಾಗಿದೆ. ಸಂಧ್ಯಾ ಸುರಕ್ಷಾ ಯೋಜನೆಯಡಿ 60 ರಿಂದ 65 ವರ್ಷದವರಿಗೆ ರೂ.800 ಹಾಗೂ 65 ವರ್ಷ ಮೇಲ್ಪಟ್ಟವರಿಗೆ ರೂ.1200 ನೀಡಲಾಗುತ್ತಿದೆ. ಇದರೊಂದಿಗೆ 2007ರಲ್ಲಿ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆಯನ್ನು ಸಹ ಜಾರಿ ಮಾಡಲಾಗಿದೆ. ಪ್ರತಿ ಜಿಲ್ಲೆಯಲ್ಲೂ ಹಿರಿಯ ನಾಗರಿಕರ ಅವಹಾಲುಗಳನ್ನು ಆಲಿಸಲು ನ್ಯಾಯ ಮಂಡಳಿ ಸ್ಥಾಪಿಸಲಾಗಿದೆ ಎಂದರು.ವಿಜ್ಞಾನ ಎಷ್ಟೇ ಮುಂದುವರೆದರೂ, ಇಂದಿಗೂ ಕೃತಕವಾಗಿ ಕಣ್ಣು ತಯಾರಿಸುವುದು ಸಾಧ್ಯವಾಗಿಲ್ಲ.ನಮ್ಮಕಣ್ಣುಗಳರಕ್ಷಣೆನಮ್ಮದೇ ಜವಾಬ್ದಾರಿಯಾಗಿದೆ. ಕೆ.ಸಿ.ವಿರೇಂದ್ರ ಪಪ್ಪಿ ಅಭಿಮಾನಿ ಬಳಗ ಹಾಗೂ ಶಂಕರ್ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಕ್ಷೇತ್ರದ 10 ಪಂಚಾಯಿತಿಗಳಲ್ಲಿ ಹಿರಿಯ ನಾಗರಿಕರು ಸೇರಿದಂತೆ ಎಲ್ಲಾ ವರ್ಗದವರಿಗೆ ಉಚಿತ ಕಣ್ಣಿನ ತಪಾಸಣೆ ಶಿಬಿರ ನಡೆಸಲಾಗಿದೆ. 4830 ಜನರಿಗೆ ಉಚಿತ ಕಣ್ಣಿನ ತಪಾಸಣೆ ನಡೆಸಲಾಗಿದೆ ಎಂದು ತಿಳಿಸಿದರು.




213 ಜನರನ್ನು ಬೆಂಗಳೂರಿನ ಶಂಕರ್ ಕಣ್ಣಿನ ಆಸ್ಪತ್ರೆಗೆ ಕರೆದೊಯ್ದುದು ಉಚಿತವಾಗಿ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ ಮಾಡಿಸಿ, ಸುರಕ್ಷಿತವಾಗಿ ಮರಳಿ ಅವರ ಮನೆಗಳಿಗೆ ತಲುಪಿಸಲಾಗಿದೆ. 861 ಜನರಿಗೆ ಉಚಿತ ಕನ್ನಡಕ ವಿತರಿಸಲಾಗಿದೆ. ಮುಂದಿನ ದಿನಗಳಲ್ಲಿ ಉಳಿದ ಪಂಚಾಯಿತಿಗಳಲ್ಲಿಯೂ ಉಚಿತ ಕಣ್ಣಿನ ಶಿಬಿರ ಆಯೋಜಿಸಲಾಗುವುದು. ಇದರೊಂದಿಗೆ ಸರ್ಕಾರದ ವತಿಯಿಂದ ಆಯೋಜಿಸಲಾದ ಶಿಬಿರದಲ್ಲೂ ಕಣ್ಣಿನ ತಪಾಸಣೆ ಹಾಗೂ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯನ್ನು ಹಿರಿಯ ನಾಗರಿಕರು ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಜಿಲ್ಲಾಸ್ಪತ್ರೆಯ ನೇತ್ರ ತಜ್ಞ ಡಾ.ಪ್ರದೀಪ್ ಮಾತನಾಡಿ, ನೇತ್ರದಾನ ಮಹಾದಾನ ಎನ್ನುವುದಕ್ಕಿಂತಲೂ ದೃಷ್ಠಿದಾನ ಮಹಾದಾನ. ಪ್ರತಿಯೊಬ್ಬರು ದೃಷ್ಠಿದಾನ ಮಾಡಬಹುದು. ಕಣ್ಣಿನ ತೊಂದರೆ ಇರುವ ತಮ್ಮ ನೆರೆ-ಹೊರೆಯ ಹಿರಿಯ ನಾಗರಿಕರನ್ನು ನೇತ್ರತಪಾಸಣಾ ಶಿಬಿರಗಳಿಗೆ ಕರೆದುಕೊಂಡು ಬರುವ ಮೂಲಕ ತಾವು ಸಹ ದೃಷ್ಠಿದಾನ ಮಾಡಬಹುದು ಎಂದು ತಿಳಿಸಿದ ಅವರು, ಕಣ್ಣಿನ ತೊಂದರೆ ಇರುವವರು ಜಿಲ್ಲಾಸ್ಪತ್ರೆಗೆ ಬಂದು ತಪಾಸಣೆಗೆ ಒಳಗಾಗಿ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್, ಮುಪ್ಪು ಎನ್ನುವುದು ಪ್ರತಿಯೊಬ್ಬರ ಜೀವನದಲ್ಲಿ ಬರಲಿದೆ. ವಯಸ್ಸಾದಂತೆ ನಮ್ಮ ದೇಹವು ಅನೇಕ ಸಮಸ್ಯೆಗಳಿಗೆ ಒಳಗಾಗುತ್ತದೆ. ಅದರಲ್ಲಿ ಪ್ರಮುಖವಾಗಿ ಕಣ್ಣುಗಳು ಅತೀ ಅವಶ್ಯಕ. ಇಲಾಖೆ ವತಿಯಿಂದ ಇದೇ ಪ್ರಥಮ ಬಾರಿಗೆ ನೇತ್ರ ತಪಾಸಣೆ ಶಿಬಿರ ಏರ್ಪಡಿಸಿ, ಶಸ್ತ್ರಚಿಕಿತ್ಸೆಗೆ ಅವಕಾಶ ಕಲ್ಪಿಸಿದ್ದು, ಹಿರಿಯ ನಾಗರಿಕರ ಅನುಕೂಲಕ್ಕಾಗಿ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ ಎಂದರು. ಮನೆಗೆ ಹಿರಿಯರು ಆಸ್ತಿ ಇದ್ದಂತೆ. ಹಿರಿಯ ನಾಗರಿಕರು ನಿಯಮಿತವಾಗಿ ಆರೋಗ್ಯ ತಪಾಸಣಾ ಮಾಡಿಕೊಂಡು ಪೌಷ್ಠಿಕಾಂಶ ಆಹಾರ ಸೇವಿಸುವ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಂಡು ಧೀರ್ಘಾಯುಷ್ಯಗಳಾಗಿ ಬದುಕಬೇಕು ಎಂದು ಆಶಯವ್ಯಕ್ತಪಡಿಸಿದರು. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜೆ.ವೈಶಾಲಿ ಮಾತನಾಡಿ, 2024-25ನೇ ಸಾಲಿನಲ್ಲಿ ಹಿರಿಯ ನಾಗರಿಕರ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯ ವಿಶೇಷ ಅಭಿಯಾನ ಯೋಜನೆಯನ್ನು ಘೋಷಿಸಿದ್ದು, ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿ, ಸರ್ಕಾರ ಆದೇಶಿಸಿದೆ. ಅದರಂತೆ ಆರೋಗ್ಯ ಇಲಾಖೆಯೊಂದಿಗೆ ಸಮನ್ವಯಿಸಿ ಎಲ್ಲ ತಾಲ್ಲೂಕುಗಳಲ್ಲಿಯೂ ಹಿರಿಯ ನಾಗರಿಕರಿಗೆ ಪ್ರತಿ ವರ್ಷ 2 ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಶಿಬಿರಗಳನ್ನು ಆಯೋಜಿಸಬೇಕಾಗಿರುತ್ತದೆ. ಆದ್ದರಿಂದ ಪ್ರಥಮ ಹಂತದಲ್ಲಿ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಹಿರಿಯ ನಾಗರಿಕರಿಗೆ ಕಣ್ಣಿನ ಪೊರೆ ಚಿಕಿತ್ಸೆಗಾಗಿ ಪೂರ್ವಭಾವಿ ಶಿಬಿರಗಳನ್ನು ಇದೇ ಜ.3 ರಿಂದ 10 ರವರಗೆ ಆಯೋಜಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪಾಪಯ್ಯ, ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿ ಡಾ.ನಾಗರಾಜ್, ತಾಲ್ಲೂಕು ಪಂಚಾಯಿತಿ ಇಒ ವೈ. ರವಿಕುಮಾರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀನಿವಾಸಮೂರ್ತಿ ಸೇರಿದಂತೆ ಹಿರಿಯ ನಾಗರಿಕರು ಇದ್ದರು.

---

## ಜಿಲ್ಲೆಯ ವಿವಿಧೆಡೆ ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆ

» **ಚಿತ್ರದುರ್ಗ**

ವೈಚಾರಿಕತೆ ಮೈಗೂಡಿಸಿಕೊಂಡು ಮೌಢ್ಯದಿಂದ ಯುವಕ-ಯುವತಿಯರು ಹೊರಬರಬೇಕಾಗಿದೆ ಎಂದು ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಬಸವರಾಜ್ ಬಚ್ಚಬೋರನಹಟ್ಟಿ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಶುಕ್ರವಾರ ಮಾನವ ಬಂಧುತ್ವ ವೇದಿಕೆ ಚಿತ್ರದುರ್ಗ ಜಿಲ್ಲಾ ಘಟಕದ ವತಿಯಿಂದ ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾವಿತ್ರಿಬಾಯಿ ಫುಲೆ ಅಂತಹ ಮಹನೀಯರ ಜನ್ಮ ದಿನಾಚರಣೆಯು ಮುಂದಿನ ದಿನಗಳಲ್ಲಿ ಇಡೀ ರಾಜ್ಯದಲ್ಲಿ ಇನ್ನೂ ಹೆಚ್ಚು ಹೆಚ್ಚಿನ ಸಂಭ್ರಮಾಚರಣೆ ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು.ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕಿ ಪ್ರೊ.ಸಿ.ವೈ.ಯಶೋಧ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಫುಲೆ ದಂಪತಿಗಳು ಹೇಗೆ ಆದರ್ಶ ಬೋಧಿಸಿದ್ದರೂ ಹಾಗೆಯೇ ಪಾಲಿಸಿದ್ದರೂ ಕೂಡ ಜೊತೆಗೆ ಮಹಿಳೆಯರಿಲ್ಲದೆ ಯಾವುದೇ ಪರಿವರ್ತನೆಯಿಲ್ಲ. ಈ ಹಿಂದೆ ಮಹಿಳೆಯರ ಸಾಧನೆಯ ಇತಿಹಾಸ ಮರೆಮಾಚಿಸಿದ್ದಾರೆ ಎಂದು ತಿಳಿಸಿದರು.ವಿದ್ಯಾರ್ಥಿ ಬಂಧುತ್ವದ ರಾಜೇಂದ್ರ ಪ್ರಸಾದ್ ಅವರು ವೇದಿಕೆಯ ಉದ್ದೇಶಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.



ಕಾರ್ಯಕ್ರಮದಲ್ಲಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಚನ್ನಕೇಶವ, ಡಾ.ಸಿದ್ದಪ್ಪ, ಡಾ.ಹಲಸಂದಿ ಸತೀಶ್, ಡಾ.ಶಿವಣ್ಣ ಹಾಗೂ ವೇದಿಕೆಯ ಮಹಿಳಾ ಸಂಚಾಲಕಿ ಎಸ್.ಬೈಲಮ್ಮ, ತಾಲ್ಲೂಕು ಸಂಚಾಲಕ ಹನುಮಂತಪ್ಪ ಇದ್ದರು.**ಜಿಲ್ಲೆಯಾದ್ಯಂತ ಆಚರಣೆ:** ಜಿಲ್ಲೆಯ ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆ, ಮೊಳಕಾಲ್ಮುರು ಸೇರಿದಂತೆ ಚಿತ್ರದುರ್ಗ ತಾಲ್ಲೂಕಿನ ಬಚ್ಚಬೋರನಹಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಚಿತ್ರದುರ್ಗ ನಗರದ ಮುರುಘಾರಾಜೇಂದ್ರ ಮಠದ ಆವರಣ ಸೇರಿದಂತೆ ಜಿಲ್ಲೆಯ ವಿವಿಧೆಡೆಗಳಲ್ಲಿ ಸಾವಿತ್ರಿಬಾಯಿ ಫುಲೆ ಜನ್ಮ ದಿನ ಆಚರಿಸಲಾಯಿತು.ಈ ಸಂದರ್ಭದಲ್ಲಿ ಚಿತ್ರದುರ್ಗ ತಾಲ್ಲೂಕು ಮಹಿಳಾ ಸಂಚಾಲಕ ಪ್ರಭಾವತಿ, ಹಿರಿಯೂರು ತಾಲ್ಲೂಕು ಮಹಿಳಾ ಸಂಚಾಲಕ ಅಂಬಿಕಾ, ಜಿಲ್ಲೆಯ ಆಶಾ ಕಾರ್ಯಕರ್ತೆಯರ ತಂಡ, ವಿದ್ಯಾರ್ಥಿಗಳು ಇದ್ದರು.

## ಪಿ.ಎಲ್.ಡಿ. ಬ್ಯಾಂಕ್ ನಿರ್ದೇಶಕರ ಚುನಾವಣೆ: ಹಿರೆಗುಂಟನೂರು ಕ್ಷೇತ್ರದಿಂದ ಕೆ.ಆರ್.ರವಿ ನಾಮಪತ್ರ



» **ಚಿತ್ರದುರ್ಗ**

ಚಿತ್ರದುರ್ಗ ತಾಲ್ಲೂಕು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿರ್ದೇಶಕರುಗಳ ಸ್ಥಾನಕ್ಕೆ ಜ.12 ರಂದು ನಡೆಯುವ ಚುನಾವಣೆಗೆ ಪಿ.ಎಲ್.ಡಿ.ಬ್ಯಾಂಕ್ ಹಾಲಿ ಅಧ್ಯಕ್ಷ ಹಿರೆಗುಂಟನೂರಿನ ಕೆ.ಆರ್.ರವಿ ಸಾಲಗಾರರ ಕ್ಷೇತ್ರದಿಂದ ಚುನಾವಣಾಧಿಕಾರಿಗೆ ಶುಕ್ರವಾರ ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ನಾಮಪತ್ರ ಸಲ್ಲಿಸಿದರು.ಪುನಿತ್ ಕೆ.ಆರ್. ಕಾಂತರಾಜ್, ಎಂ.ಪಿ.ಪ್ರಕಾಶ್, ಜಿ.ಎಂ.ಮಲ್ಲೇಶ್ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಉಪಸ್ಥಿತರಿದ್ದರು.

---

**ಪ್ರಮುಖ ಸುದ್ದಿ**

ಗಾಯಿತ್ರಿ ಕಲ್ಯಾಣಮಂಟಪ ಆವರಣದಲ್ಲಿ ಹರಿಹರಸುತ ಸೇವಾ ಸಮಿತಿಯಿಂದ ಅಯ್ಯಪ್ಪಸ್ವಾಮಿಯ ಪಡಿಪೂಜಾ ಕಾರ್ಯಕ್ರಮ

# ಭಕ್ತಿಶ್ರದ್ದೆಯಿಂದ ಬದುಕಿನಲ್ಲಿ ಆತ್ಮವಿಶ್ವಾಸ: ಶಾಸಕ ರಘುಮೂರ್ತಿ

» **ಚಳ್ಳಕೆರೆ**

ಇಲ್ಲಿನ ಗಾಯಿತ್ರಿ ಕಲ್ಯಾಣಮಂಟಪದಲ್ಲಿ ಗುರುವಾರ ರಾತ್ರಿ ಆಯೋಜಿಸಿದ್ದ ಹರಿಹರಸುತ ಸೇವಾ ಸಮಿತಿಯ ನಾಲ್ಕನೇ ವರ್ಷದ ಅಯ್ಯಪ್ಪಸ್ವಾಮಿ ಪೂಜೆ ಮತ್ತು ಪಡಿಪೂಜಾ ಕಾರ್ಯಕ್ರಮಕ್ಕೆ ಶಾಸಕ ಟಿ.ರಘುಮೂರ್ತಿ ಆಗಮಿಸಿ ಪೂಜಾ ಕಾರ್ಯದಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಳೆದ ಹಲವಾರು ದಶಕಗಳಿಂದ ಅಯ್ಯಪ್ಪಸ್ವಾಮಿಯ ಪೂಜೆಯನ್ನು ನಡೆಸಿಕೊಂಡು ಬರುತ್ತಿದ್ದು, ಲಕ್ಷಾಂತರ ಭಕ್ತರು ಪ್ರತಿವರ್ಷವೂ ಶಬರಿಮಲೆಯ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡುತ್ತಾರೆ. ಈ ಭಾರಿ ವಿಶೇಷವಾಗಿ ಗುರುಸ್ವಾಮಿಗಳಾದ ಜಗ್ಗುಸ್ವಾಮಿ, ರೇಣುಕಾಸ್ವಾಮಿ ಶಿಷ್ಯವೃಂದ ಸಾವಿರಾರು ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ವಿಶೇಷ ಪೂಜೆಯ ಸೌಕರ್ಯವನ್ನು ಕಲ್ಪಿಸಿಕೊಟ್ಟಿದೆ. ಮಹಾಗಣಪತಿಹೋಮ, ನವಗ್ರಹಹೋಮ, ಗೋಪೂಜೆ, ಪಡಿಪೂಜೆ, ಪುಷ್ಪಾಭಿಷೇಕ, ಹರಿವರಾಸಹನಂ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಭಕ್ತಿಯಿಂದ ಪಾಲ್ಗೊಂಡಿದ್ದೀರಿ ನಿಮ್ಮೆಲ್ಲರಿಗೂ ಶ್ರೀಸ್ವಾಮಿಯ ಅನುಗ್ರಹ ಸಿಗಲಿ ಎಂದು ಶುಭಹಾರೈಸುವುದಾಗಿ ತಿಳಿಸಿದರು.



ಈ ಭಾರಿ ಮತ್ತೊಮ್ಮೆ ಇಲ್ಲಿನ ಭಕ್ತಾಧಿಗಳಿಗೆ ಶಬರಿಮಲೆ ದೇವಸ್ಥಾನದ ಕೃತಕವಾಗಿ ನಿರ್ಮಿಸಿ ಶ್ರೀಅಯ್ಯಪ್ಪಸ್ವಾಮಿ ಪ್ರತಿಷ್ಠಾಪಿಸಿ ದರ್ಶನ ಮಾಡಿಸುವ ಮೂಲಕ ಈ ಸಮಿತಿ ಇಲ್ಲಿನ ಸಾವಿರಾರು ಭಕ್ತರಿಗೆ ಸ್ವಾಮಿಯ ದರ್ಶನ ಮಾಡಿಸಿದಂತಾಗಿದೆ ಎಂದರು.

ವ್ಯವಸ್ಥಾಪಕರಲ್ಲಿ ಒಬ್ಬರಾದ ಎ.ಕೀರ್ತಿಪ್ರಸಾದ್ ಮಾತನಾಡಿ, ಕ್ಷೇತ್ರದ ಶಾಸಕ ಟಿ.ರಘುಮೂರ್ತಿ ಸಹಕಾರದಿಂದ ಕಳೆದ ನಾಲ್ಕು ವರ್ಷಗಳಿಂದ ಈ ಕಾರ್ಯಕ್ರಮವನ್ನು ಎಲ್ಲರ ಸಹಕಾರದಿಂದ ಭಕ್ತಿ ಶ್ರದ್ದೆಯಿಂದ ಆಚರಣೆ ಮಾಡಲಾಗುತ್ತಿದೆ. ಈ ಬಾರಿ ಶಬರಿಮಲೆ ಸನ್ನಿಧಿಯ ಆರ್ಚಕರಾದ ಆನಂದನಂಬೂದರಿ,ದೇಶದವಿದೇಶಗಳಲ್ಲಿ ಅಯ್ಯಪ್ಪಸ್ವಾಮಿ ಭಕ್ತಿಗೀತೆ ಹಾಗೂ ಭಜನೆಗೆ ಹೆಸರಾದ ವೀರಮಣಿರಾಜು, ಕೇದಾರದಿಂದ ಶಬರಿಮಲೆಗೆ ಸುಮಾರು ನಾಲ್ಕುಸಾವಿರ ಕಿ.ಮೀ ಪಾದಯಾತ್ರೆ ನಡೆಸಿದ ಅಂಕುಶ್‌ಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಸಂತಸ ತಂದಿದೆ. ನಿರೀಕ್ಷೆಗೂ ಮೀರಿ ಭಕ್ತರು ಆಗಮಿಸಿದ್ದಾರೆ, ಭಜನೆಯಲ್ಲಿ ಭಾಗವಹಿಸಿದ್ದಾರೆ. ಸ್ವಾಮಿ ಅಯ್ಯಪ್ಪ ತಮ್ಮೆಲ್ಲರಿಗೂ ಸುಖ, ಶಾಂತಿ ನೆಮ್ಮದಿ ಪಾಲಿಸಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದರು.

ಮಂಜುನಾಥಕಂಚಿ, ಜಗದೀಶ್ವರಚಾರಿ, ಎಲ್.ರುದ್ರಮುನಿಯಪ್ಪ, ತಾಲ್ಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ಡಾ.ಅನಂತ ರಾಮ್‌ಗೌತಮ್, ಕಾರ್ಯದರ್ಶಿ ಎಂ.ಸತ್ಯನಾರಾಯಣರಾವ್, ಖಜಾಂಚಿ ಬಿ.ಕೃಷ್ಣಮೂರ್ತಿ, ನಿರ್ದೇಶಕರಾದ ಸಿ.ಎಸ್.ಗೋಪಿನಾಥ, ನಾಮಸಾಧನ ಟ್ರಸ್ಟ್ ಕಾರ್ಯದರ್ಶಿ ಪ್ರಕಾಶ್ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಫಾಸ್ಟ್ ನ್ಯೂಸ್

### ಮನಮೋಹನ್ ಸಿಂಗ್ ಕುರಿತು ನುಡಿ ನಮನ ಹಾಗೂ ಸಂವಾದ ಇಂದು

» ಹೊಸದುರ್ಗ

ಹೆಜ್ಜೆ ಸಾಲು ಒಂದು ಸಾಂಸ್ಕೃತಿಕ ವೇದಿಕೆ. ಹೊಸದುರ್ಗ ವತಿಯಿಂದ ಇಂದು ಜ.4 ರಂದು ನಗರದ ದುರ್ಗಾಂಬಿಕ ಸಮೂದಾಯ ಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ಮಾಜಿ ಪ್ರಧಾನಿ, ಆರ್ಥಿಕ ತಜ್ಞ ಡಾ. ಮನಮೋನ್ ಸಿಂಗ್ ರವರ ಭಾವ ಪೂರ್ಣ ಶ್ರದ್ಧಾಂಜಲಿ ಮತ್ತು ಭಾರತದ ಆರ್ಥಿಕ ಅಭಿವೃದ್ಧಿ, ಉದಾರೀಕರಣ ಮತ್ತು ಮನಮೋನ್ ಸಿಂಗ್ ರವರ ಕುರಿತು ನುಡಿ ನಮನ ಸಂವಾದ ಕಾರ್ಯಕ್ರಮ ನಡೆಯಲಿದ್ದು ತಾಲ್ಲೂಕಿನ ಎಲ್ಲಾ ಸಾರ್ವಜನಿಕರು ಕಾಂಗ್ರೇಸ್‌ನ ಎಲ್ಲಾ ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಬೇಕೆಂದು ಹೆಜ್ಜೆ ಸಾಲು ಒಂದು ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ. ಗೋ.ತಿಪ್ಪೇಶ್ ತಿಳಿಸಿದ್ದಾರೆ.

### ವಿದ್ಯುತ್ ವ್ಯತ್ಯಯ

» ದಾವಣಗೆರೆ

ಹರಿಹರ ನಗರಸಭೆ ವ್ಯಾಪ್ತಿಗೆ ಪೂರೈಕೆಯಾಗುವ ಕವಲೆತ್ತು ಗ್ರಾಮದ ಹತ್ತಿರವಿರುವ ಜಾಕ್‌ವೆಲ್‌ನಲ್ಲಿ ಹೊಸ ವಿದ್ಯುತ್ ಕೇಬಲ್ ಅಳವಡಿಸುವುದರಿಂದ ಜನವರಿ 4 ರಂದು ಬೆಳಗ್ಗೆ 11 ರಿಂದ ಸಂಜೆ 4 ಗಂಟೆಯವರೆಗೆ ನಿರಂತರ ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪೌರಾಯುಕ್ತರು ತಿಳಿಸಿದ್ದಾರೆ.

### ಸಿಎಂ ಬದಲಾವಣೆಗಾಗಿ ಕಾಂಗ್ರೆಸ್ಸಿನ ಒಕ್ಕಲಿಗ ಶಾಸಕರು ಸಭೆ ಸೇರಿದ್ದಾರೆ ಎನ್ನುವುದು ಸುಳ್ಳು: ಸಿದ್ದು

» ಬೆಂಗಳೂರು

ಮುಖ್ಯಮಂತ್ರಿಗಳ ಬದಲಾವಣೆಗಾಗಿ ಕಾಂಗ್ರೆಸ್ಸಿನ ಕೆಲವು ಒಕ್ಕಲಿಗ ಶಾಸಕರು ಪ್ರತ್ಯೇಕ ಸಭೆ ನಡೆಸಿದ್ದಾರೆ ಎನ್ನುವುದು ಸುಳ್ಳು ಎಂದು ಮುಖ್ಯಮಂತ್ರಿಗಳು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಮಾಧ್ಯಮದವರೊಂದಿಗೆ ಇಂದು ಮಾತನಾಡಿದ ಅವರು ಊಟಕ್ಕೆ ಸೇರಿದರೆ ಸಭೆ ನಡೆಸಿದ್ದಾರೆ ಎಂದು ಮಾಧ್ಯಮದವರು ಭಾವಿಸಿದ್ದಾರೆ ಎಂದರು.

### ಪ್ರತಿಯೊಬ್ಬರಲ್ಲೂ ಗುರಿ ಇದ್ದರೆ ಜೀವನದಲ್ಲಿ ಗೆಲುವು ಸಾಧಿಸಲು ಸಾಧ್ಯ



» ಹೊಸದುರ್ಗ

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಶಿಕ್ಷಣ ಎಂಬುದು ಬಹು ಪ್ರಧಾನವಾದ್ದು ವಿದ್ಯಾರ್ಥಿಗಳು ಭವಿಷ್ಯದ ಕನಸು ಕಾಣಬೇಕು ಪ್ರತಿಯೊಬ್ಬರಲ್ಲೂ ಸಹಾ ಗುರಿ ಇದ್ದರೆ ಜೀವನದಲ್ಲಿ ಗೆಲವು ಸಾಧಿಸಬಹುದು ಎಂದು ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಶಾಂತಕುಮಾರ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಪಟ್ಟಣದ ಶ್ರೀ ವಾಣಿವಿಲಾಸ ಸಂಯುಕ್ತ ಪ್ರೌಢಶಾಲೆಯಲ್ಲಿ ಗುರುವಾರ ಸಂಜೆ ಆಯೋಜಿಸಲಾಗಿದ್ದ 47 ನೇ ವರ್ಷದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನ ಉದ್ಘಾಟಿಸಿ ಮಾತನಾಡಿದರು. ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಮನೆತನದಿಂದಲೇ ಬರುವಂತದ್ದಾಗಿದೆ. ವಿದ್ಯಾರ್ಥಿಗಳಿಗೆ ಯಾವುದೇ ವಿಷಯವನ್ನು ಕಲಿಯಬೇಕಾದರೆ, ಮುಖ್ಯವಾಗಿ ಕಲಿಕಾ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಆಗ ಯಶಸ್ಸು ನಮ್ಮನ್ನು ಹಿಂಬಾಲಿಸುತ್ತ ಬರುತ್ತದೆ ನಾವು ಎಷ್ಟು ಓದುತ್ತೇವೆ ಎಂಬುದು ಮುಖ್ಯವಲ್ಲ. ಓದಿದ ವಿಷಯ ಯಾವುದು ನೆನಪಿನಲ್ಲಿದೆ ಎಂಬುದು ಬಹು ಮುಖ್ಯವಾಗಿರುತ್ತದೆ ಎಂದು ಕಿವಿ ಮಾತು ಹೇಳಿದರು. ಪೌರಾಡಳಿತ ಮತ್ತು ಹಜ್ ಸಚಿವರ ಆಪ್ತ ಸಲಹೆಗಾರ ಫಯಾಜ್‌ಅಮೀದ್ ಎ, ಮಾತನಾಡಿ ನಾನು ಕೂಡ ಶಾಲೆ ಹಳೆ ವಿದ್ಯಾರ್ಥಿ ನಾನು ಇದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ ಇದೇ ಅಂಗಳದಲ್ಲಿ ಆಡವಾಡಿದ್ದೇನೆ,ಇಲ್ಲಿಯ ನನೆಪುಗಳು ಸಾಕಷ್ಟು ಇವೆ, ಉನ್ನತ ವ್ಯಾಸಂಗವನ್ನ ಬೇರೆ ಕಡೆ ಮಾಡಿ ಇಂಜಿನಿಯರ್ ವ್ಯಾಸಂಗ ಮಾಡಿ ಇದೀಗ ಸಚಿವರ ಆಪ್ತ ಸಲಹೆಗಾರನಾಗಿದ್ದೇನೆ ಎಂದರೆ ಅದಕ್ಕೆ ಈ ಶಾಲೆಕರಣ ಈ ಶಾಲೆಗೆ ನನ್ನಿಂದ ಎಷ್ಟು ಸಾಧ್ಯವೋ ಅಷ್ಟು ಸಹಾಯ ಹಾಗು ಸಹಕಾರವನ್ನ ನೀಡುತ್ತೇನೆ ಎಂದರು. ತಿಪಟೂರು ಶ್ರೀ ರಾಘವೇಂದ್ರ ವಿದ್ಯಾ ಸಂಸ್ಥೆಯ ಅಧ್ಯಕ್ಷ ಕೆ.ರಮೇಶ್‌ಸಿಂಗ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತಾಲೂಕು ಅರಣ್ಯಾಧಿಕಾರಿ ಸುನಿಲ್, ಪ್ರೋ.ಶ್ರೀವಾತ್ಸವ್, ಸಿವಿಲ್‌ಇಂಜಿನಿಯರ್ ಸಂತೋಷ್, ಉದ್ಯಮಿ ಲೋಹಿತಾಶ್ವ, ಪೋಲಿಸ್ ಎನ್.ಕೆ.ಕುಮಾರ್ ಉದ್ಯಮಿ ಯೂಸೋಫ್, ಸಾರಿಗೆ ಇಲಾಖೆಯ ಅಶೋಕ್ ಸಾಹಿತಿ ನಾಗತಿಹಳ್ಳಿಮಂಜುನಾಥ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.ಕಾರ್ಯಕ್ರಮದ ನಂತರ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

---

ಜನವರಿ 5, 6 ರಂದು ಎಂಬಿಎ ಮೈದಾನದಲ್ಲಿ ವೈವಿಧ್ಯಮಯ ರಾಜ್ಯ ಮಟ್ಟದ ಯುವಜನೋತ್ಸವ

# ಕಾಲೇಜು ವಿದ್ಯಾರ್ಥಿಗಳಿಂದ ಬೃಹತ್ ಜಾಥಾ

» ದಾವಣಗೆರೆ

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಿಂದ ಜನವರಿ 5 ಮತ್ತು 6 ರಂದು ನಗರದ ಬಾಪೂಜಿ ಎಂಬಿಎ ಮೈದಾನದಲ್ಲಿ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ನಡೆಯಲಿದ್ದು ಇದರ ಅಂಗವಾಗಿ ಶುಕ್ರವಾರ ಗುಂಡಿ ವೃತ್ತದಿಂದ ಸಾವಿರಾರು ಕಾಲೇಜು ವಿದ್ಯಾರ್ಥಿಗಳಿಂದ ಬೃಹತ್ ಜಾಥಾ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿವರ್ಣಾಧಿಕಾರಿ ಡಾ.ಸುರೇಶ್ ಬಿ ಇಟ್ನಾಳ್ ಮೋತಿ ವೀರಪ್ಪ ಕಾಲೇಜು ಮುಂಭಾಗದ ಗುಂಡಿ ವೃತ್ತದಲ್ಲಿ ಜಾಥಾಗೆ ಚಾಲನೆ ನೀಡಿ ಮಾತನಾಡಿ ದಾವಣಗೆರೆ ನಗರ ಹಾಗೂ ಜಿಲ್ಲೆಯ ಯುವಕ–ಯುವತಿಯರು ಹಾಗೂ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಎರಡು ದಿನಗಳ ಕಾಲ ನಡೆಯುವ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಜಾನಪದ ನೃತ್ಯ, ಜಾನಪದ ಗೀತೆ, ವಿಜ್ಞಾನ ವಸ್ತುಪ್ರದರ್ಶನ, ಕವನ ರಚನೆ, ಕಥೆ ಬರೆಯುವುದು, ಚಿತ್ರಕಲೆ, ಘೋಷಣ ಸ್ಪರ್ಧೆಗಳ ಜೊತೆಗೆ ಸಂಜೆ ನಡೆಯುವ ಮಣಿಕಾಂತ್ ಕದ್ರಿಯವರ ಸಂಗೀತ ಕಾರ್ಯಕ್ರಮ ವೀಕ್ಷಣೆ ಮಾಡುವ ಮೂಲಕ ಸದುಪಯೋಗ ಮಾಡಿಕೊಳ್ಳಲು ಕರೆ ನೀಡಿದರು. ಜಾಥಾದಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು



ವಿದ್ಯಾರ್ಥಿಗಳು ಭಾಗವಹಿಸಿದ್ದು ವಿವಿಧ ಘೋಷವಾಕ್ಯಗಳ ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗಿದರು. ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ನೀರನ್ನು ಉಳಿಸಿ ಭೂಮಿಯನ್ನು ರಕ್ಷಿಸಿ, 'ಸ್ವಚ್ಚ ಮತ್ತು ಹಸಿರು ಅದು ನಮ್ಮ ಕನಸು' ಮತ್ತು 'ಉಸಿರಾಡಲು ಪ್ರೀತಿಸಿ, ಮರಗಳನ್ನು ಉಳಿಸಿ' 'ಮಾಲಿನ್ಯವನ್ನು ಉಳಿಸಿ, ಬದುಕಲು ಪ್ರಾರಂಭಿಸಿ'.ವಿದ್ಯಾರ್ಥಿನಿಯರು 'ಹಣದಾಸೆಗೆ ಬಲಿಯಾಗದೆ ಯೋಚಿಸಿ ಮತ ಚಲಾಯಿಸಿ, ಪ್ರಜಾಪ್ರಭುತ್ವ ಗಟ್ಟಿಗೊಳಿಸಿ ಎಂದು ಕೂಗುತ್ತಾ ಸಾಗಿದರು.

ಕಾಲ್ನೆಡಿಗೆ ಜಾಥಾದಲ್ಲಿ ಅತ್ಯುತ್ತಮವಾಗಿ ಸಂಘಟಿಸಿದ ಉತ್ತಮ ತಂಡಕ್ಕೆ ಅಭಿನಂದನಾ ಪತ್ರವನ್ನು ಶಾಸಕರಾದ ಬಿ.ಪಿ ಹರೀಶ್ ವಿತರಿಸಿ ಯುವಕರು ಯುವಜನೋತ್ಸವದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಅದರ ಅನುಕೂಲತೆಗಳ ಬಗ್ಗೆ ತಿಳಿದುಕೊಂಡು ದೇಶದ ಪ್ರಗತಿಗೆ ಪೂರಕವಾಗಿ ಶ್ರಮಿಸಬೇಕು ಎಂದು ತಿಳಿಸಿದರು.ಪೋಲಿಸ್ ತಂಡದ ಎಲ್ಲಾ ಸಿಬ್ಬಂದಿಗಳು ಕಾಲ್ನೆಡಿಗೆಯಲ್ಲಿ ತಮ್ಮ ಶಿಸ್ತಿನ ಸಿಪಾಯಿಗಳಂತೆ ನಡೆದುಕೊಂಡು ರಸ್ತೆ ಸುರಕ್ಷತೆಯ ಅರಿವು ಮೂಡಿಸಿದರು.

ಜಾಥಾವು ಗುಂಡಿ ವೃತ್ತದಿಂದ ವಿದ್ಯಾರ್ಥಿಭವನ, ಡಾ.ಬಿ.ಆರ್ ಅಂಬೇಡ್ಕರ್ ವೃತ್ತ, ಜಯದೇವ ವೃತ್ತ, ಮಹಾನಗರಪಾಲಿಕೆ ಮುಂಭಾಗದಿಂದ ಎವಿಕೆ ರಸ್ತೆಯ ಮೂಲಕ ಮೋತಿ ವೀರಪ್ಪ ಕಾಲೇಜಿನ ಆವರಣ ತಲುಪಿತು. ಜಾಥಾದಲ್ಲಿ 75 ವರ್ಷದ ಹಿರಿಯ ವ್ಯಕ್ತಿ ನಾಗರಾಜ್ ಭಾಗವಹಿಸಿ ಎಲ್ಲಾರ ಮೆಚ್ಚುಗೆಗೆ ಪಾತ್ರರಾದರು.ಕಾಲ್ನೆಡಿಗೆ ಜಾಥಾದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಹೆಚ್ಚುವರಿ ಪೋಲೀಸ್ ಅಧೀಕ್ಷಕರಾದ ವಿಜಯಕುಮಾರ್ ಎಂ.ಸಂತೋಷ್, ಮಂಜುನಾಥ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ, ಸಿಪಿಓ ಮಲ್ಲಾನಾಯ್ಕ್, ಡಿಡಿಪಿಯು ಕರಿಸಿದ್ದಪ್ಪ, ಡಿಡಿಪಿಐ ಕೊಟ್ರೇಶ್, ಡಿಆರ್‌ಸಿಎಸ್ ಮಧುಶ್ರೀನಿವಾಸ್, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ರೇಣುಕಾ, ಯುವ ಪ್ರಶಸ್ತಿ ಪುರಸ್ಕೃತ ಮಾಗನಹಳ್ಳಿ ಮಂಜುನಾಥ್ ಮತ್ತು ನಗರದ ಪದವಿಪೂರ್ವ, ಪದವಿ ಕಾಲೇಜುಗಳ ವಿದ್ಯಾರ್ಥಿಗಳು , ಸಾರ್ವಜನಿಕ ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಸರ್ಕಾರಿ ಇಲಾಖೆಯ ಸಿಬ್ಬಂದಿಗಳು,ಸಾರ್ವಜನಿಕರು ಭಾಗವಹಿಸಿದ್ದರು.

---

ಎನ್‌ಆರ್‌ಎಲ್‌ಎಂ ಸಂಜೀವಿನಿ ಸ್ವ ಸಹಾಯ ಗುಂಪುಗಳಿಗೆ ಸ್ಥಳದಲ್ಲೇ ಸಾಲ ಮಂಜೂರಾತಿ ಮೇಳ

# 7 ಸಂಘಗಳಿಗೆ 27 ಲಕ್ಷ ಸಾಲ ಮಂಜೂರಾತಿ

» ದಾವಣಗೆರೆ

ಸಂಜೀವಿನಿ ಸ್ವ-ಸಹಾಯ ಸಂಘದ ಸದಸ್ಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲರಾಗಲು ಸುತ್ತುನಿಧಿ, ಸಮುದಾಯ ಬಂಡವಾಳನಿಧಿ, ಹಾಗೂ ಸರ್ಕಾರದ ಆರ್ಥಿಕ ನೆರವು ಒದಗಿಸುವ ಸಂಜೀವಿನಿ ಕಾರ್ಯಕ್ರಮಗಳು ಅತ್ಯಂತ ಪ್ರಮುಖ ಪಾತ್ರವಹಿಸಿವೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ತಿಳಿಸಿದರು.

ಅವರು ಶುಕ್ರವಾರ ಜಿಲ್ಲಾ ಪಂಚಾಯತ್ ಆವರಣದಲ್ಲಿನ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯ ಸಂಜೀವಿನಿ ಸ್ವ ಸಹಾಯ ಸಂಘಗಳಿಗೆ ವಿವಿಧ ಬ್ಯಾಂಕ್‌ಗಳ ಮೂಲಕ ಏರ್ಪಡಿಸಲಾದ ಸಾಲ ಮೇಳ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಎನ್‌ಆರ್‌ಎಲ್‌ಎಂ ರಡಿ 9700 ಸ್ವಹಾಯ ಸಂಘಗಳು ಇವೆ, ಇದರಲ್ಲಿ ದಾವಣಗೆರೆ ತಾಲೂಕಿನಲ್ಲಿ 1861 ಸ್ವಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಿಗೆ ಒಟ್ಟು ರೂ. 11 ಕೋಟಿ 80 ಲಕ್ಷ ಸಮುದಾಯ ಬಂಡವಾಳನಿಧಿ ಸರ್ಕಾರದಿಂದ ಬಿಡುಗಡೆಯಾಗಿದೆ. ಇದರ ಉಪಯೋಗವನ್ನು ಪಡೆದುಕೊಳ್ಳಬೇಕು ಎಂದರು. ಸಂಜೀವಿನಿ ಸ್ವ ಸಹಾಯ ಸಂಘಗಳಿಗೆ ಬ್ಯಾಂಕ್‌ಗಳಿಂದ ಸಾಲವನ್ನು ಕೊಡಲಾಗುತ್ತವೆ, ಸಾಲ ಪಡೆದು ಉತ್ಪಾದಕಾ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಕುಟುಂಬವನ್ನು ಆರ್ಥಿಕವಾಗಿ ಸದೃಡವಾಗಿ



ನೋಡಿಕೊಳ್ಳಲು ಸಂಜೀವಿನಿ ಸಂಘದಿಂದ ಮಾತ್ರ ಸಾಧ್ಯವಾಗಿದೆ ಎಂದು ಮಹಿಳೆಯರಿಗೆ ತಿಳಿದರು. ಸಾಲಮೇಳದಲ್ಲಿ 170 ಸ್ವ ಸಹಾಯ ಸಂಘಗಳಿಂದ ಸಾಲ ಮಂಜೂರಾತಿಗಾಗಿ ಅರ್ಜಿ ಸ್ವೀಕರಿಸಲಾಗಿದ್ದು ಬ್ಯಾಂಕ್‌ಗಳು ಪರಿಶೀಲನೆ ನಡೆಸಿ ಚಟುವಟಿಕೆಯನ್ನಾಧರಿಸಿ ಮಂಜೂರಾತಿ ನೀಡಲಿವೆ ಎಂದರು.

ಸಾಲ ಮೇಳದಲ್ಲಿ ಕೆನರಾ ಬ್ಯಾಂಕ್, ಗ್ರಾಮೀಣ ಬ್ಯಾಂಕ್, ಯೂನಿಯನ್ ಬ್ಯಾಂಕ್, ಡಿಸಿಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಸೇರಿದಂತೆ ಇನ್ನಿತರೆ ಬ್ಯಾಂಕ್‌ಗಳು ಮೇಳದಲ್ಲಿ ಭಾಗವಹಿಸಿದ್ದವು.

ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕಿ ರೇಷ್ಮ ಕೌಸರ್, ಅಭಿಯಾನ ಮ್ಯಾನೇಜರ್ ಬೋಜರಾಜ್, ಸಂಜೀವಿನಿ ಸ್ವಸಹಾಯ ಸಂಘದ ಅಧ್ಯಕ್ಷರು, ಸದಸ್ಯರು, ಪದಾಧಿಕಾರಿಗಳು ಭಾಗವಹಿಸಿದ್ದರು.

---

### ಲಿಂಗತ್ವ ಆಧಾರಿತ ದೌರ್ಜನ್ಯ ವಿರುದ್ಧ ಜಾಗೃತಿ ಕಾರ್ಯಕ್ರಮ



» ಚಿತ್ರದುರ್ಗ

ಹಿರಿಯೂರು ನಗರದ ಸಾಮರ್ಥ್ಯ ಸೌಧದಲ್ಲಿ ಶುಕ್ರವಾರ ಲಿಂಗತ್ವ ಆಧಾರಿತ ದೌರ್ಜನ್ಯ ವಿರುದ್ಧ ರಾಷ್ಟೀಯ ಅಭಿಯಾನ ಕುರಿತು ಜಾಗೃತಿ ಕಾರ್ಯಕ್ರಮನ್ನು ಹಮ್ಮಿಕೊಳ್ಳಲಾಗಿತ್ತು.

ಲಿಂಗತಜ್ಞೆ ಕುಮಾರಿ ಗೀತಾ ಡಿ. ನಾಯ್ಕ್ ಬೇಟಿ ಬಚಾವೋ ಬೇಟಿ ಪಢವೋ, ಪಿಸಿ & ಪಿಎನ್‌ಡಿಟಿ ಕಾಯ್ದೆ, ಮಹಿಳಾ ಸಹಾಯವಾಣಿ ಸಂಖ್ಯೆ 181, ಪೊಲೀಸ್ ಸಹಾಯವಾಣಿ 112, ಮಕ್ಕಳ ಸಹಾಯವಾಣಿ ಸಂಖ್ಯೆ 1098, ಬಾಲ್ಯ ವಿವಾಹ, ಬಾಲ ಕಾರ್ಮಿಕರ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ಕೌಟುಂಬಿಕ ದೌರ್ಜನ್ಯ ಕಾಯ್ದೆ ಕುರಿತು ಜಾಗೃತಿ ಮೂಡಿಸಿದರು. ಇದೇ ವೇಳೆ ಸುರಕ್ಷಿತ ಸ್ಪರ್ಶ, ಅಸುರಕ್ಷಿತ ಸ್ಪರ್ಶ ತಿಳಿವಳಿಕೆ ನೀಡಿ, ಮಕ್ಕಳ ಮೇಲೆ ಯಾವುದೇ ರೀತಿಯ ದೌರ್ಜನ್ಯಗಳ ನಡೆದಾಗ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಕರೆ ಮಾಡುವಂತೆ ಹೇಳಿದರು. ಹಿರಿಯೂರು ತಾ.ಪಂ. ನರೇಗಾ ಸಹಾಯಕ ನಿರ್ದೇಶಕ ಶಿವಮೂರ್ತಿ ಲಿಂಗತ್ವ ಆಧಾರಿತ ದೌರ್ಜನ್ಯ ತಡೆ ಇರುತ್ತಾ ಪ್ರತಿಜ್ಞಾ ವಿಧಿ ಬೋದಿಸಿದರು. ನಂತರ ಮಾತನಾಡಿ ಕುಟುಂಬದಲ್ಲಿ ಗಂಡು ಮತ್ತು ಹೆಣ್ಣಿನ್ನು ಸಮಾನವಾಗಿ ಕಾಣಬೇಕು. ಇಬ್ಬರಿಗೂ ಸರಿಯಾದ ಶಿಕ್ಷಣವನ್ನು ನೀಡಿ, ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿಸಬೇಕು ಎಂದರು. ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ಕೆ. ಸೈಫ್ ಉದ್ದಿನ್ ಖಾನ್, ಹಿರಿಯೂರು ತಾಲೂಕು ಎನ್.ಆರ್.ಎಲ್.ಎಂ. ದಿವ್ಯರಾಣಿ ಸೇರಿದಂತೆ, ಎನ್.ಆರ್.ಎಲ್.ಎಂ. ವಲಯ ಮೇಲ್ವಿಚಾರಕರು ಹಾಗೂ ಎಂ.ಬಿ.ಕೆ.ಗಳು ಕೃಷಿ ಸಖಿ, ಪಶು ಸಖಿ, ಅಂಗನವಾಡಿ ಮೇಲ್ವಿಚಾರಕಿಯರು, ಕಾರ್ಯಕರ್ತೆಯರು ಉಪಸ್ಥಿತರಿದ್ದರು.

---

### ಜ.6ಕ್ಕೆ ನಾಟಕ ಪ್ರದರ್ಶನ

ಚಿತ್ರದುರ್ಗ: ವಸಂತ ಕಲಾ ನಾಟ್ಯ ಸಂಘ ದಾವಣಗೆರೆಯ ವೃತ್ತಿ ರಂಗಭೂಮಿ ಕಲಾವಿದೆ ಕಲ್ಪನಾ ನಾಕೋಡ್ ಇವರ ಸಹಾಯಾರ್ಥವಾಗಿ ರೈತ ಮುಖಂಡ ಕೆ.ಪಿ.ಭೂತಯ್ಯನವರ ಸಹಯೋಗದೊಂದಿಗೆ ದಿ.ಕೆ.ಎನ್.ಸಾಳಂಕಿ ಕೃತಿ ಕಿವುಡ ಮಾಡಿದ ಕಿತಾಪತಿ ಹಾಸ್ಯಭರಿತ ನಾಟಕ ಜ.6 ರಂದು ಸಂಜೆ ಆರು ಗಂಟೆಗೆ ತ.ರಾ.ಸು.ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

---

**ಪ್ರಮುಖ ಸುದ್ದಿ**

# ಮನಸ್ಸಿಗೆ ನಾಟುವ ರೀತಿ ಪಾಠ ಬೋಧಿಸಿದಾಗ ಉತ್ತಮ ಫಲಿತಾಂಶ

» ಚಿತ್ರದುರ್ಗ

ನಿಮ್ಮಲ್ಲಿರುವ ಕೌಶಲ್ಯ, ಪರಿಣಿತಿಯನ್ನು ಬಳಸಿ ಶಾಲೆಯಲ್ಲಿ ಮಕ್ಕಳ ಮನಸ್ಸಿಗೆ ನಾಟುವ ರೀತಿಯಲ್ಲಿ ಪಾಠ ಬೋಧಿಸಿದಾಗ ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಗುತ್ತದೆಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಶಿಕ್ಷಕರುಗಳಿಗೆ ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲೆಯ ಇಂಗ್ಲಿಷ್ ಶಿಕ್ಷಕರುಗಳ ಕ್ಲಬ್ ಸಹಯೋಗದೊಂದಿಗೆ ತ.ರಾ.ಸು. ರಂಗಮಂದಿರದಲ್ಲಿ ಜಿಲ್ಲೆಯ ಪ್ರೌಢಶಾಲೆಯ ಆಂಗ್ಲ ಶಿಕ್ಷಕರುಗಳಿಗೆ ಶುಕ್ರವಾರ ಏರ್ಪಡಿಸಲಾಗಿದ್ದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರುಗಳ ಮೇಲೆ ಒತ್ತಡವಿದೆ ನಿಜ. ಆದರೆ ಎಂದಿಗೂ ನೀವುಗಳು ಒತ್ತಡ ಅಂದುಕೊಳ್ಳಬಾರದು. ಸಮಾಜದಲ್ಲಿ ಅತ್ಯಂತ ತೃಪ್ತಿ ಕೊಡುವ ವೃತ್ತಿ ಯಾವುದಾದರೂ ಇದ್ದರೆ ಅದು ಶಿಕ್ಷಕ ವೃತ್ತಿ ಮಾತ್ರ. ಸಂಸ್ಕಾರಯುತ ಮಕ್ಕಳನ್ನು ಸಮಾಜಕ್ಕೆ ಕೊಡುವ ಅವಕಾಶ ಶಿಕ್ಷಕರುಗಳ ಕೈಯಲ್ಲಿದೆ. ಮಕ್ಕಳು ಹತ್ತನೆ ತರಗತಿಗೆ ಬಂದಾಗ ಮಾತ್ರ

ಫಲಿತಾಂಶ ಸುಧಾರಣೆಯತ್ತ ಗಮನ ಕೊಡುವ ಬದಲು ಎಂಟನೆ ತರಗತಿಯಿಂದಲೆ ಮಕ್ಕಳನ್ನು ಪರೀಕ್ಷೆಗೆ



ತಯಾರು ಮಾಡುವ ಕೆಲಸವಾಗಬೇಕು. ಎಲ್ಲಾ ಮಕ್ಕಳಲ್ಲಿಯೂ ಒಂದಲ್ಲ ಒಂದು ರೀತಿಯ ಪ್ರತಿಭೆಯಿರುತ್ತದೆ. ಅದನ್ನು ಗುರುತಿಸುವ ಜವಾಬ್ದಾರಿ ಪೋಷಕರು ಹಾಗೂ ಶಿಕ್ಷಕರುಗಳ ಮೇಲಿದೆ ಎಂದು ಹೇಳಿದರು.

ಗಣಿತ ಹೊರತುಪಡಿಸಿದರೆ ಎರಡನೆಯದು ಇಂಗ್ಲಿಷ್ ಕಷ್ಟ ಎನ್ನುವ ಭಯವನ್ನು ಮಕ್ಕಳ ಮನಸ್ಸಿನಿಂದ ತೆಗೆಯಬೇಕಿರುವುದರಿಂದ ಶಿಕ್ಷಕರುಗಳು ಮಕ್ಕಳ

ಮನೋಸಾಮರ್ಥ್ಯ ಅರಿತು ಮನಸ್ಸಿಗೆ ನಾಟುವ ರೀತಿಯಲ್ಲಿ ಇಂಗ್ಲಿಷ್ ಬೋಧಿಸಬೇಕು. ಪದ, ವಾಕ್ಯ, ವ್ಯಾಕರಣದ ಜೊತೆ ಸುಲಭವಾಗಿ ಇಂಗ್ಲಿಷ್ ಭಾಷೆಯನ್ನು ಮಕ್ಕಳಿಗೆ ಕಲಿಸಬೇಕಿದೆ. ಗುಣಮಟ್ಟದ ಶಿಕ್ಷಣದಿಂದ ಮಾತ್ರ ಫಲಿತಾಂಶದಲ್ಲಿ ಸುಧಾರಣೆ ಸಾಧ್ಯ. ಇಂದಿನ ದಿನಗಳಲ್ಲಿ ಬರವಣಿಗೆಯೇ ಮಕ್ಕಳಲ್ಲಿ ಕಡಿಮೆಯಾಗುತ್ತಿದೆ. ಶಿಕ್ಷಣದ ಜೊತೆ ಸೃಜನಶೀಲ ಕೌಶಲ್ಯವನ್ನು ಮಕ್ಕಳಿಗೆ ಕಲಿಸಬೇಕಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಕಡೆ ಹೆಚ್ಚಿನ ಗಮನ ಕೊಡುವಂತೆ ಶಿಕ್ಷಕರುಗಳಿಗೆ ಅಪರ ಜಿಲ್ಲಾಧಿಕಾರಿ ಕರೆ ನೀಡಿದರು.ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್. ಮಂಜುನಾಥ್ ಮಾತನಾಡಿ ಎಸ್. ಎಸ್.ಎಲ್.ಸಿ.ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರಬೇಕಾದರೆ ಭಾಷಾವಾರು ಕಾರ್ಯಾಗಾರಗಳು ಅನುಕೂಲವಾಗುತ್ತದೆ. ಗುಣಮಟ್ಟದ ಶಿಕ್ಷಣವನ್ನು ಶಾಲೆಗಳಲ್ಲಿ ಬೋಧಿಸಿ ಮಕ್ಕಳನ್ನು ಪರೀಕ್ಷೆಗೆ ಅಣಿಗೊಳಿಸಿದಾಗ ಫಲಿತಾಂಶದಲ್ಲಿ ಸುಧಾರಣೆ ಕಂಡುಕೊಳ್ಳಬಹುದು ಎಂದು ಶಿಕ್ಷಕರುಗಳಿಗೆ ತಾಕೀತು ಮಾಡಿದರು.

ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯದ ಪ್ರವಾಚಕ ಹನುಮಂತರಾಯಪ್ಪ ಮಾತನಾಡುತ್ತ ಶಾಲೆಗಳಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಿದಾಗ ಹತ್ತನೆ ತರಗತಿ ಫಲಿತಾಂಶದಲ್ಲಿ ಸುಧಾರಣೆ ಕಂಡುಕೊಳ್ಳಲು ಸಹಕಾರಿಯಾಗಲಿದೆ. ಕಾರ್ಯಾಗಾರಗಳ ಮೂಲಕ ಮಕ್ಕಳು ಪರೀಕ್ಷೆಯನ್ನು ಹೇಗೆ ಎದುರಿಸಬೇಕೆಂದು ತಯಾರು ಮಾಡುವ ಹೊಣೆಗಾರಿಕೆ ಶಿಕ್ಷಕರುಗಳ ಮೇಲಿದೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆ ವಿದ್ಯಾಧಿಕಾರಿಗಳಾದ ಎನ್.ಆರ್. ತಿಪ್ಪೇಸ್ವಾಮಿ, ಸಿದ್ದಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ನಾಗಭೂಷಣ್, ಡಿ.ವೈ.ಪಿ.ಸಿ. ವೆಂಕಟೇಶ್, ವಿಷಯ ಪರಿವೀಕ್ಷಕರುಗಳಾದ ಶಿವಣ್ಣ, ಗೋವಿಂದಪ್ಪ, ಚಂದ್ರಣ್ಣ, ಪ್ರಶಾಂತ್, ಮಹಲಿಂಗಪ್ಪ, ಶಿವಣ್ಣ, ಸಂಪತ್, ಆಂಗ್ಲ ಭಾಷೆ ಶಿಕ್ಷಕರ ಕ್ಲಬ್ ಅಧ್ಯಕ್ಷ ಸಿ.ಬಿ.ಸಿದ್ದೇಶ್, ತಾಲ್ಲೂಕು ಅಧ್ಯಕ್ಷ ಎಸ್. ಗುರುಮೂರ್ತಿ, ಆಂಗ್ಲ ಭಾಷಾ ವಿಷಯ ಪರಿವೀಕ್ಷಕ ಹೆಚ್.ಟಿ.ಚಂದ್ರಣ್ಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಎಸ್.ರಾಜಪ್ಪ

ಕಾರ್ಯದರ್ಶಿ ಶ್ರೀನಿವಾಸ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಶಿವಣ್ಣ ಇನ್ನು ಅನೇಕರು ವೇದಿಕೆಯಲ್ಲಿದ್ದರು.

ಸಂಪನ್ಮೂಲ ವ್ಯಕ್ತಿ ಬೆಳಗಾಂನ ಅಲ್ತಾಫ್ ಜಹಾಂಗೀರ್ ಇಂಗ್ಲಿಷ್ ಪರೀಕ್ಷೆಗೆ ಮಕ್ಕಳನ್ನು ಯಾವ ರೀತಿ ತಯಾರು ಮಾಡಬೇಕೆಂಬುದರ ಕುರಿತು ಉಪನ್ಯಾಸ ನೀಡಿದರು.

## ಫಾಸ್ಟ್ ನ್ಯೂಸ್

### ಎರಡು ಹೊತ್ತಿನ ಊಟಕ್ಕೂ ಶ್ರಮಿಸುತ್ತಿರುವ ಕಟ್ಟ ಕಡೆಯ ಜನರ ಪರವಾಗಿ ನಿಮ್ಮ ಬದ್ಧತೆ ತೋರಿಸಿ: ಸಿ.ಎಂ ಸಿದ್ದರಾಮಯ್ಯ ಕರೆ

» **ಬೆಂಗಳೂರು**

ನಮಗೆ ಸಿಕ್ಕಿರುವ ವಿದ್ಯೆ ಮತ್ತು ಅವಕಾಶಗಳ ಹಿಂದೆ ಸಮಾಜದ ಋಣ ಇದೆ. ಈ ಋಣ ತೀರಿಸುವುದು ನಮ್ಮ ಜವಾಬ್ದಾರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಎಎಸ್ ಅಧಿಕಾರಿಗಳಿಗೆ ಕರೆ ನೀಡಿದರು. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘ ಹೊರತಂದಿರುವ ಕ್ಯಾಲೆಂಡರ್ ಮತ್ತು ದಿನಚರಿ ಬಿಡುಗಡೆಗೊಳಿಸಿ ಮಾತನಾಡಿದರು. ಎರಡು ಹೊತ್ತಿನ ಊಟಕ್ಕೂ ಶ್ರಮಿಸುತ್ತಿರುವ ಕಟ್ಟ ಕಡೆಯ ಜನರ ಪರವಾಗಿ ನಿಮ್ಮ ಬದ್ಧತೆ ತೋರಿಸಿ ಎಂದು ಸೂಚಿಸಿದರು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಮಾಡಿರುವ ಭಾಷಣವನ್ನು ನೀವೆಲ್ಲಾ ಓದಬೇಕು. ಐತಿಹಾಸಿಕ ಕಾರಣಗಳಿಂದಾಗಿ ಆರ್ಥಿಕ, ಸಾಮಾಜಿಕ ಅಸಮಾನತೆ ಇದೆ. ಇದನ್ನು ಹೋಗಲಾಡಿಸಬೇಕು ಎನ್ನುವುದು ಅಂಬೇಡ್ಕರ್ ಅವರ ಆಶಯವಾಗಿತ್ತು. ಈ ಆಶಯ ಈಡೇರಿಸಲು ನಾವು ನಮಗೆ ಸಿಕ್ಕಿರುವ ಅವಕಾಶವನ್ನು ಬಳಸಿಕೊಂಡು ಕರ್ತವ್ಯ ನಿರ್ವಹಿಸಬೇಕು ಎಂದರು. ನಾನು ಎರಡು ಬಾರಿ ಮುಖ್ಯಮಂತ್ರಿಆಗಿದ್ದೀನಿ. ಮೊದಲ ಬಾರಿ ಸಿಎಂ ಆಗಿ ಹಲವಾರು ಭಾಗ್ಯಗಳು, ಈ ಬಾರಿ ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೀವಿ. ಮನಮೋಹನ್ ಸಿಂಗ್ ಅವರು ಪ್ರಧಾನಿ ಆಗಿ ಆಹಾರ, ಶಿಕ್ಷಣ, ಮಾಹಿತಿ ಹಕ್ಕುಗಳನ್ನು ಮಾಡುವ ಮೂಲಕ ಸಂವಿಧಾನದ ನಿರ್ದೇಶಕ ತತ್ವಗಳನ್ನು ಜನರ ಹಕ್ಕುಳನ್ನಾಗಿ ಮಾಡಿದರು. ಇವೆಲ್ಲವೂ ಅಂಬೇಡ್ಕರ್ ಅವರ ಆಶಯಗಳನ್ನು ಈಡೇರಿಸುವ ಉದ್ದೇಶವನ್ನೇ ಹೊಂದಿವೆ. ಆದ್ದರಿಂದ ಮಧ್ಯವರ್ತಿಗಳೇ ಇಲ್ಲದ ನಮ್ಮ ಗ್ಯಾರಂಟಿಗಳನ್ನು ಮನೆ ಮನೆ ತಲುಪಿಸಿ ಎಂದರು. ಅಂಬೇಡ್ಕರ್ ಅವರಿಂದ ಬುದ್ಧ, ಬಸವ, ಗಾಂಧಿ ಎಲ್ಲರೂ ಸಮಾಜದ ಸಮಾನತೆಗಾಗಿ, ತಾರತಮ್ಯದ ಸಮಾಜದ ಬದಲಾವಣೆಗಾಗಿ ಶ್ರಮಿಸಿದರು. ಆದರೂ ಇನ್ನೂ ಅಸಮಾನತೆ ಹೋಗಿಲ್ಲ ಎಂದರೆ ಎಲ್ಲರಿಗೂ ಸಮಾನ ಅವಕಾಶ ಸಿಗದೇ ಇರುವುದೇ ಮುಖ್ಯ ಕಾರಣ. ಆದ್ದರಿಂದ ಸಮಾಜದಲ್ಲಿ ಪಟ್ಟಭದ್ರರು ಇನ್ನೂ ಹೆಚ್ಚಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಸೂಟು ಬೂಟು ಹಾಕಿಕೊಂಡು ಬರುವವರನ್ನು ಕುರ್ಚಿಯಲ್ಲಿ ಕೂರಿಸಿ ಮಾತನಾಡಿಸುವುದನ್ನು, ಮಾಸಲು ಬಟ್ಟೆಯಲ್ಲಿ ಬರುವ ಬಡವರನ್ನು ನಿರ್ಲಕ್ಷ್ಯದಿಂದ ಕಾಣುವುದು ನಮ್ಮ ಮಾನಸಿಕ ಗುಲಾಮಗಿರಿಯ ದ್ಯೋತಕ. ಇದನ್ನು ಕಿತ್ತೊಗೆದು ಪ್ರತಿಯೊಬ್ಬರಿಗೂ ಸಮಾಜದಲ್ಲಿ ಅವಕಾಶಗಳು ಸಿಗುವಂತೆ ನೋಡಿಕೊಳ್ಳಿ ಎಂದು ಕರೆ ನೀಡಿದರು. ಎಲ್ಲಿಯವರೆಗೂ ಜಾತಿ, ವರ್ಗ ವ್ಯವಸ್ಥೆ ಇರುತ್ತದೋ ಅಲ್ಲಿಯವರೆಗೂ ಅಸಮಾನತೆ ಇರುತ್ತದೆ. ಕೆಎಎಸ್ ಅಧಿಕಾರಿಗಳ ಸಂಘ ಮುಂದಿಟ್ಟಿರುವ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಕೆಎಎಸ್ ಅಧಿಕಾರಿಗಳ ಸಂಖ್ಯೆ ಹೆಚ್ಚಿಸಲು ನಾವು ಸಿದ್ದರಿದ್ದೇವೆ. ಆದರೆ ಸಂಖ್ಯೆ ಮುಖ್ಯವಲ್ಲ. ನಿಮ್ಮ ಗುಣಾತ್ಮಕ ಕರ್ತವ್ಯ , ಸೇವೆ ಮುಖ್ಯ ಎಂದರು.

### ಜನವರಿ 5, 6 ರಂದು ಯುವಜನೋತ್ಸವ, ಕೆಎಸ್‌ಆರ್‌ಟಿಸಿ ಯಿಂದ ಕಾರ್ಯಕ್ರಮ ಸ್ಥಳಗಳಿಗೆ ಬಸ್ ಸೌಕರ್ಯ

» **ದಾವಣಗೆರೆ**

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಿಂದ ಜನವರಿ 5 ಮತ್ತು 6 ರಂದು ರಾಜ್ಯ ಮಟ್ಟದ ಯುವಜನೋತ್ಸವವನ್ನು ಏರ್ಪಡಿಸಲಾಗಿದೆ. ಮುಖ್ಯಮಂತ್ರಿಗಳು ಜನವರಿ 5 ರಂದು ಬೆಳಗ್ಗೆ 11 ಗಂಟೆಗೆ ಎಂಬಿಎ ಮೈದಾನದಲ್ಲಿನ ಪ್ರಧಾನ ವೇದಿಕೆಯಲ್ಲಿ ಕಾರ್ಯಕ್ರಮ ಉದ್ಘಾಟಿಸುವರು.

ಯುವಜನೋತ್ಸವ ಕಾರ್ಯಕ್ರಮದ ಅಂಗವಾಗಿ ಜ.5 ರ ಸಂಜೆ 8 ಗಂಟೆಯಿಂದ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ ಮತ್ತು ತಂಡದವರಿಂದ ಎಂಬಿಎ ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಎರಡು ದಿನಗಳ ಕಾಲ ವಿವಿಧ ವೇದಿಕೆಗಳಲ್ಲಿ ಯುವಜನೋತ್ಸವ ಸ್ಪರ್ಧೆಗಳು ನಡೆಯುವುದರಿಂದ ಸಾರ್ವಜನಿಕರು ಕಾರ್ಯಕ್ರಮಗಳನ್ನು ವೀಕ್ಷಣೆ ಮಾಡಲು ಅನುಕೂಲವಾಗಲೆಂದು ಕೆ.ಎಸ್.ಆರ್.ಟಿ.ಸಿ.ಯಿಂದ ಕಾರ್ಯಕ್ರಮ ನಡೆಯುವ ಎಲ್ಲಾ ಸ್ಥಳಗಳಿಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣದ ಮುಂಭಾಗದಿಂದ ಎವಿಕೆ ಕಾಲೇಜು ರಸ್ತೆ, ಗುಂಡಿ ವೃತ್ತ, ಲಕ್ಷ್ಮೀ ಪ್ಲೋರ್‌ಮಿಲ್, ಬಾಪೂಜಿ ಎಂಬಿಎ ಕಾಲೇಜು, ಡಾ; ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬಿಐಇಟಿ ಕಾಲೇಜ್, ಲಲಿತಕಲಾ ಮಹಾವಿದ್ಯಾಲಯ, ಜೆಜೆಎಂ ಕಾಲೇಜು ಮೂಲಕ ರೈಲ್ವೆ ಸ್ಟೇಷನ್, ಬಸ್ ನಿಲ್ದಾಣ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಸ್‌ಗಳು ನಿರಂತರವಾಗಿ ಸಂಚರಿಸಲಿವೆ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.



# ತುಳಸಿಗೌಡ

## ಎಂಬ ವೃಕ್ಷಮಾತೆ ಅರಣ್ಯದ ವಿಶ್ವಕೋಶ!

ಸಾವಿರಾರು ಸಸ್ಯಗಳ ಪೋಷಿಸಿ ಬೆಳೆಸಿದ ವೃಕ್ಷಮಾತೆ. ಸಾವಿರಾರು ಗಿಡಮರಗಳ ಕುರಿತು ಮಾಹಿತಿಯ ಆಗರವಾದ ಅರಣ್ಯ ವಿಶ್ವಕೋಶ ತುಳಸಿಗೌಡ ಇಂದು ನಮ್ಮನ್ನು ಅಗಲಿದ್ದಾರೆ. ಹಾಲಕ್ಕಿ ಒಕ್ಕಲಿಗ ಮನೆತನದ ಕೂಸಾಗಿ ಜನಿಸಿ ಭೂತಾಯಿಯ ಮಡಿಲಿಗೆ ಸಸ್ಯಗಳ ನೆರಳನ್ನು ಹಾಸಿದ ಹಾಲಿನ ಮನಸ್ಸಿನಾಕೆ. ಬಡತನದ ಬಾಲ್ಯ ಯಾವ ಬಳಲಿಕೆಯನ್ನು ಆ ಮಾತೆಗೆ ತರಲಿಲ್ಲ. ಭೂಮಿ ಸಹನೆಯ ಭೂಮಿ ತೂಕದ ಮಹಿಳೆ ತುಳಸಿ ಗೌಡ. ಕಷ್ಟ ನೂರು ಬಂದರು ನಗುನಗುತ ಬಾಳಿ ಹಸಿರ ನಗುವ ಇಳೆಯೊಳು ಹಂಚಿಯೇ ಹೋದ ಮಹಾಮಾತೆ.

1944 ರಲ್ಲಿ ಉತ್ತರ ಕನ್ನಡ ಜಿಲ್ಲೆ ಅಂಕೋಲ ತಾಲ್ಲೂಕಿನ ಹೊನ್ನಳ್ಳಿ ಗ್ರಾಮದ ನಾರಾಯಣಗೌಡ ಹಾಗು ನೀಲಿ ದಂಪತಿಗಳ ಸುಪುತ್ರಿಯಾಗಿ ಜನಿಸಿದವರು ತುಳಸಿ. ವಿಪರ್ಯಾಸವೆಂದರೆ ತನ್ನ ಶೈಶವದ ಎರಡನೇ ವರ್ಷದಲ್ಲಿ ತಂದೆ ನಾರಾಯಣರ ಸಾವು ಎದುರಾಗುತ್ತದೆ. ತಂದೆಯ ಪ್ರೀತಿ ಅಕ್ಕರೆ ಕಾಳಜಿಯ ಕಾಣುವ ಮೊದಲೆ ತಂದೆಯ ಮರಣ ಬಡತನದ ಬಾಳಿಗೆ ಬರಸಿಡಲಾಗುತ್ತದೆ. ತಾಯಿ ನೀಲಿಯ ದಿನಗೂಲಿ ಹಾಗು ಕಾಡಿನಿಂದ ಒಣ ಕಟ್ಟಿಗೆ ತಂದು ಮಾರಾಟ ಮಾಡಿ ಬಂದ ಸ್ವಲ್ಪ ಜೀವನಾದಾಯದಲ್ಲಿ ಬದುಕಿನ ನಿರ್ವಹಣೆ ಸಾಗುತ್ತದೆ.

ಎಲ್ಲ ಮಕ್ಕಳಂತೆ ಪ್ರಾಥಮಿಕ ಮಾಧ್ಯಮಿಕ ಹೈಸ್ಕೂಲು ಓದುವ ಕಾಲೇಜಿಗೆ ನಡೆಯುವ ಪದವಿ ಪಡೆಯುವುದಿರಲಿ ಅಂಗನವಾಡಿಗೆ ಹೋಗುವ ಅವಕಾಶವು ತುಳಸಿಗೆ ಒದಗಲೇ ಇಲ್ಲ. ಓರಗೆಯ ಮಕ್ಕಳೊಡನೆ ಆಡಿ ನಲಿಯುವ ಬಾಲ್ಯವೂ ಆಕೆಗೆ ಒದಗದಿದ್ದುದು ಬದುಕಿನ ದುಃಸ್ತರತೆಗೆ ಸಾಕ್ಷಿ. ತಾಯಿಯ ಕಂಕುಳ ಸೆರಗಿನಲ್ಲಿಯೇ ಬಾಲ್ಯ ಕಳೆದು ತಾಯಿಯ ಜೊತೆ ಉತ್ತರ ಕನ್ನಡದ ಸಹ್ಯಾದ್ರಿ ಬೆಟ್ಟ ಸಾಲುಗಳ ಹತ್ತಿಳಿದು ಕಟ್ಟಿಗೆ ಸಂಗ್ರಹಿಸುವ ಪೇಟೆಯಲ್ಲಿ ಮಾರುವ ದಿನನಿತ್ಯದ ಕಾಯಕ ರೂಢಿಯಾಯಿತು. ಬೆಳೆದಂತೆ ತಾನು ತಾಯಿಯ ಕಂಕುಳಾಸೆರೆ ತೊರೆದು ನಡೆದು ಬೆಟ್ಟ ಹತ್ತಿಳಿವ ಕಷ್ಟಗಳ ತನ್ನದಾಗಿಸಿಕೊಂಡಳು. ಒಣ ಕಟ್ಟಿಗೆ ಹೊರೆಗಳ ಹೊರುವ ಬಡತನಕ್ಕೆ ತನ್ನ ಒಗ್ಗಿಸಿಕೊಂಡಳು.

ಇಂತಹ ಸಂದರ್ಭದಲ್ಲಿಯೇ ತಾಯಿಯ ಹತ್ತಿರದ ಸಂಬಂಧಿಯಾದ ಗೋವಿಂದೇಗೌಡನ ಜೊತೆ ತುಳಸಿಯ ವಿವಾಹವು ನಡೆದುಬಿಡುತ್ತದೆ. ತನ್ನ ತಾನರಿಯದ ವಯಸ್ಸಲ್ಲಿ ಮದುವೆ ತಾಯಿಯ ಜವಾಬ್ದಾರಿಯ ಕಳೆದುಕೊಳ್ಳುವ ಅನಿವಾರ್ಯತೆಯಾಗಿರುತ್ತದೆ.ತುಳಸಿಯಬದುಕೇ ಹೀಗೇನೋ ಬಾಳ ದಾರಿಗೆ ಆಸರೆಯಾಗಬೇಕಾದ ತನ್ನ ಜೀವನದ ಸುಖ ಸಂತೋಷಗಳ ಮರಳಿ ಕೊಡಬೇಕಾದ ಕಳೆದುಕೊಂಡ ತಂದೆಯ ವಾತ್ಸಲ್ಯ ಮಮತೆಯ ತೋರಿಸಬೇಕಾದ ಎಲ್ಲ ಸಂಕಷ್ಟಗಳಲ್ಲಿ ಆಸರೆಯಾಗಿ ಬೆಂಬಲವಾಗಿ ನಿಲ್ಲಬೇಕಾದ ಪತಿ ಗೋವಿಂದೇಗೌಡ ಅಕಾಲಿಕ ಮರಣಕ್ಕೆ ಈಡಾದುದು ವಿಧಿ ವಿಪರೀತವೇ ಸರಿ. ತುಳಸಿಯ ಬಾಳು ತಾರಾಮಾರಿಯಾಗಿ ಅಲ್ಲೋಲಕಲ್ಲೋಲವಾದ ಕ್ಷಣವದು. ಬಾಲ್ಯದಿ ಜನ್ಮದಾತ ತಂದೆಯ ಕಳೆದುಕೊಂಡು ವಯಸ್ಸಲ್ಲದ ವಯಸ್ಸಲ್ಲಿ ವಿವಾಹದ ಬಂಧನಕ್ಕೊಳಗಾಗಿ ಅದೂ ನುಚ್ಚುನೂರಾದುದು ತುಳಸಿಯ ಬಾಳಿಗೆ ದೈವದ ಕನಿಕರವೇ ಇಲ್ಲವೇನೋ ಎನಿಸದಿರದು. ಅಷ್ಟರಲ್ಲಿ ಮಗು ಸುಬ್ಬರಾಯಗೌಡ ಬದುಕಿನ ಆಶಾಕಿರಣವಾಗಿ ಮಡಿಲು ತುಂಬಿರುತ್ತಾನೆ.



ಮುಂದೆ ತುಳಸಿಗೆ ಬದುಕು ಸಹ್ಯಾದ್ರಿ ಬೆಟ್ಟ ಸಾಲುಗಳಂತೆ ಅಗಾಧವಾಗಿರುತ್ತದೆ. ಏರಿಳಿಯಲೇಬೇಕು. ಬದುಕಿನ ಬಂಡಿ ಎಳೆಯಲೇಬೇಕು. ಇಂತಲ್ಲಿಯೇ ತುಳಸಿಯ ಬದುಕಿನ ಸುವರ್ಣ ಕಾಲದ ಜೀವನಕ್ಕೆ ಕಿರು ಮುನ್ನುಡಿಯೆನ್ನುವಂತೆ ಮಾಸ್ತಿಕಟ್ಟೆ ಅರಣ್ಯ ವಲಯದ ಅಧಿಕಾರಿಗಳ ಕೋರಿಕೆಯಂತೆ ಅರಣ್ಯದ ನೂರಾರು ಮರಗಳ ಬೀಜಗಳ ಸಂಗ್ರಹಿಸಿಕೊಡುವ ಕಾರ್ಯವು ದೊರೆಯಿತು. ಇದು ದಿನಗೂಲಿಯ ಮೇಲೆ. ಸ್ವಂತ ಜಮೀನಿಲ್ಲದ ಯಾವ ಹುಟ್ಟುವಳಿಯ ಆದಾಯವು ಇಲ್ಲದ ತುಳಸಿಯ ಜೀವನ ತನ್ನ ಪಾಡಿಗೆ ತಾನು ದಿನ ಬೆಟ್ಟಗಳ ಹತ್ತಿಳಿದು ಕಟ್ಟಿಗೆ ತಂದು ಮಾರಿ ಬಂದ ನಾಲ್ಕೈದು ರೂಪಾಯಿಗಳಲ್ಲಿ ಜೀವನ ನಡೆಯುತ್ತಿತ್ತು. ಈಗ ಅರಣ್ಯ ಇಲಾಖೆಗೆ ಗಿಡಮರಗಳ ಬೆಳೆಸಲು ಬೀಜಗಳ ಸಂಗ್ರಹಿಸಿ ನೀಡುವ ಕಾಯಕ ರೂಪಾಯಿ ಆದಾಯದ ಅಲ್ಪವೇ ಆದರೂ ತನಗೆ ತೃಪ್ತಿ ತರುವ ಕಾಯಕವಾಗಿರುತ್ತದೆಂದು ಒಪ್ಪುತ್ತಾಳೆ.


ಹುಟ್ಟಿನಿಂದಲು ಕಾಡು ಮೇಡಿನ ನಡುವೆಯೇ ಜೀವನ ಸಾಗಿಸಿದ ತುಳಸಿಗೆ ಸಾವಿರಾರು ಗಿಡಮರಗಳು ತನ್ನ ಸಂಗಾತಿಗಳೇ ಆಗಿರುತ್ತವೆ. ಪಕ್ಷಿ ಪ್ರಾಣಿಗಳು ಸ್ನೇಹಿತರೇ ಆಗಿರುತ್ತಾರೆ. ಹೊಂಗೆ ಬಾಳೆ ಏಲಕ್ಕಿ ಬಾಗಿ ತಾಳೆ ಅಡಿಕೆ ತೆಂಗು ನಂದಿ ಹೊನ್ನೆ ಗಂಧ ಪೈಕಸ್ ನೇರಳೆ ನೀಲಗಿರಿ ಬಿದಿರು ಮಾವು ಜಾಲಿ ಹುಣಸೆ ಜಾಯಿಕಾಯಿ ಹಲಸು ಕೋಕಂ ಗೇರು ಬಾದಾಮಿ ನೂರಾರು ಮರಗಳ ಬೀಜಗಳ ಸಂಗ್ರಹಿಸುವ ಅವುಗಳ ಮರುಹುಟ್ಟಿಗೆ ನೆರವಾಗುವ ಕೆಲಸ ತುಳಸಿಗೆ ಮಹೋನ್ನತವಾಗಿ ತೋರುತ್ತದೆ. ಜೀವನ ನಿರ್ವಹಣೆಗೆ ಅನಾನುಕೂಲವಾದರು ಈ ಕೆಲಸವನ್ನು ತನ್ನ ಕಟ್ಟಿಗೆ ಹೊತ್ತು ತರುವ ಕೆಲಸದ ಜೊತೆ ಪ್ರಮಾಣಿಕವಾಗಿ ಮಾಡುತ್ತಾಳೆ. ತುಳಸಿಯ ಕಾರ್ಯಶ್ರದ್ಧೆ ಮತ್ತು ನಿಷ್ಠೆ ಅ.ನಾ. ಯಲ್ಲಪ್ಪರೆಡ್ಡಿಯಂತಹ ಅರಣ್ಯಾಧಿಕಾರಿಗಳ ಮನಸೆಳೆದು ಮಾಸ್ತಿಕಟ್ಟೆ ಅರಣ್ಯ ವಲಯದ ಮತ್ತಿಘಟ್ಟ ಸಸ್ಯಕ್ಷೇತ್ರದಲ್ಲಿ ಬೀಜಗಳನ್ನು ಪ್ಯಾಕೇಟ್ ಮಾಡುವ ಮಣ್ಣು ಗೊಬ್ಬರ ಬೆರೆಸಿ ಸಸ್ಯಗಳ ಬೆಳೆಸುವ ದಿನಗೂಲಿ ಕೆಲಸ ನೀಡಲು ಕಾರಣವಾಗುತ್ತದೆ.

ತುಳಸಿಯ ಬದುಕಿನಲ್ಲಿ ಇದು ಬಹಳ ಮಹತ್ವದ ಘಟ್ಟ. ಚಿಕ್ಕಂದಿನಿಂದ ಕಾಡು ಅಲೆವ ಅಲೆಮಾರಿತನ ತೊರೆದು ಒಂದು ಕಡೆ ನೆಲೆನಿಂತು ಕಾಡು ಬೆಳೆಸುವಂತಹ ವೃಕ್ಷಗಳ ಸಾಕುವ ಮಹಾಕಾಯಕ ದೊರಕಿತು. ತಂದೆತಾಯಿಯಿಲ್ಲದ ಆಸರೆಯ ಗಂಡನಿಲ್ಲದ ತುಳಸಿಗೆ ಮಗನ ಜೊತೆ ಗಿಡಮರಗಳೇ ತನ್ನ ಜೀವನದ ಆಸರೆಯಾಗಿ ಒದಗಿದ್ದು ದೈವಕೃಪೆಯೇ ಸರಿ. ಬಂದಂತೆ ಬದುಕನ್ನ ಸ್ವೀಕರಿಸುವ ನಿರ್ಲಿಪ್ತ ಮನಸ್ಥಿತಿಯ ತುಳಸಿಗೆ ಕಷ್ಟಗಳು ಬದುಕಿನ ಭಾಗವೇ ಆದರು ಗಿಡಮರಗಳ ಬೆಳೆಸುವ ಸುಖದಲ್ಲಿ ನಿತ್ಯದ ಕಷ್ಟಗಳು ಇಬ್ಬನಿಯ ಹನಿಯಂತೆ ಕರಗಿ ಹೋಗುತ್ತವೆ. ಇವರು ಬೀಜವೂರಿ ಬೆಳೆಸಿದ ಗಿಡಗಳು ಇಂದು ಹೊನ್ನಾಳಿ, ಮಾಸ್ತಿಗಟ್ಟ, ಹೊಲಿಗೆ, ಹೆಗ್ಗೂರು, ಅಡಗೂರು, ಅಗಸೂರು, ಸಿರಿಗುಂಜಿಯ ಸುತ್ತಮುತ್ತಲ ಬಯಲುಭೂಮಿಯಲ್ಲಿ ಐವತ್ತು ಸಾವಿರಕ್ಕು ಅಧಿಕ ಮರಗಳ ಬೆಳೆಯಲು ಕಾರಣವಾಗಿದೆ. ಲಕ್ಷೋಪಲಕ್ಷ ಪಕ್ಷಿಗಳ ಸಂಕುಲ ಜೀವಿಸಲು ಸಾವಿರಾರು ಪ್ರಾಣಿಗಳು ಬದುಕಲು, ಅಂತರ್ಜಲ ಹೆಚ್ಚಲು, ಭೂಮಿಯ ತಾಪಮಾನ ಕಡಿಮೆಯಾಗಿಸಲು ನೆರವಾಗಿದೆ.

ಸಾಮಾನ್ಯ ಕಾಡಿನ ಹಾಲಕ್ಕಿ ಬುಡಕಟ್ಟಿನ ಬಡತನದಿ ಹುಟ್ಟಿ ಬೆಳೆದ ಹೆಣ್ಣು ತನ್ನ ಕಾಯಕದ ಮೂಲಕ ಲಕ್ಷಾಂತರ ಸಸ್ಯಗಳ ಬೆಳೆಸುವ ಮಹೋನ್ನತ ಕಾರ್ಯ ಮಾಡಿ ಕರ್ನಾಟಕ ರಾಜ್ಯದ ಭಾರತ ದೇಶದ ಮಾಧ್ಯಮಗಳ ಗಮನ ಸೆಳೆಯುತ್ತಾಳೆ. ತನ್ನ ದಿನಗೂಲಿಯ ಕೆಲಸದಿಂದ ವಯೋನಿವೃತ್ತಿ ಹೊಂದಿದ ಮೇಲೂ ಅರಣ್ಯ ಇಲಾಖೆಯ ಸಸ್ಯಕ್ಷೇತ್ರಕ್ಕೆ ನಿತ್ಯವೂ ಹೋಗಿ ತನ್ನ ಕಾರ್ಯ ಮಾಡುವ ಇಂದಿನ ಯುವಪೀಳಿಗೆಗೆ ಮಾರ್ಗದರ್ಶನ ಮಾಡುವ ಪರೋಪಕಾರತೆ ಗಿಡಮರಗಳ ಮೇಲಿನ ಪ್ರೀತಿ ತೋರುತ್ತಾಳೆ. ಸರ್ಕಾರೇತರ ಸಂಘ ಸಂಸ್ಥೆಗಳಿಂದ ಮೊದಮೊದಲಿಗೆ ಕಾಡ ಸಂರಕ್ಷಣೆಗಾಗಿ ಗಿಡಮರಗಳ ರಕ್ಷಣೆ ಹಾಗು ಅವುಗಳ ಸಂತಾನ ವೃದ್ಧಿಗಾಗಿ ಗೌರವ ಸನ್ಮಾನಗಳು ಹುಡುಕಿ ಬಂದವು. ಸ್ಥಳೀಯ ಸಂಸ್ಥೆಗಳು ತುಳಸಿಯ ವೃಕ್ಷ ಸಂತಾನ ವೃದ್ಧಿಯ ಕಾರ್ಯಗಳ ದಾಖಲಿಸಿ ಪ್ರೋತ್ಸಾಹ ನೀಡುವ ಕೈಂಕರ್ಯ ತೋರಿದವು. ನಂತರದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ತನ್ನ ಗೌರವ ಸಮರ್ಪಿಸಿತು. ಭಾರತ ದೇಶದ ಘನ ಕೇಂದ್ರ ಸರ್ಕಾರವು ಪ್ರಿಯದರ್ಶಿನಿ ವೃಕ್ಷಮಿತ್ರ ಹಾಗು ಭಾರತದ ನಾಗರೀಕ ಪುರಸ್ಕಾರ ಪದ್ಮಶ್ರೀ ನೀಡಿ ಗೌರವಿಸಿತು.

ಇರುವ ಒಬ್ಬ ಮಗ ಬದುಕಿನ ಬೆಳಕಾಗಿದ್ದ ಸುಬ್ಬರಾಯಗೌಡನಿಗು ಪರಿಸರದ ಗಿಡಮರ ಕಾಳಜಿಯ ಕಾಯಕ ಹೇಳಿಕೊಟ್ಟ ತುಳಸಮ್ಮನಾಗಿ, ಅರಣ್ಯ ಇಲಾಖೆಯ ಸಿಬ್ಬಂಧಿ ಅಧಿಕಾರಿಗಳಿಗೆ ತುಳಸವ್ವನಾಗಿ, ನೆರೆಹೊರೆ ಬಂಧುಬಳಗ ಗುರುತಿಸುವ ಎಲ್ಲರಿಗು ತುಳಸಜ್ಜಿಯಾಗಿ ಗೌಡ ಒಕ್ಕಲಿಗರ ಅದಾವುದೇ ಹೆಸರಿನ ಹಿರಿಮೆ ತೋರದೆ ತನಗಿಂತ ಕಿರಿಯರಿಲ್ಲ ಮರಗಿಡಗಳಿಗಿಂತ ಹಿರಿಯರಿಲ್ಲ ಎಂದೇ ಜೀವಿಸಿದ ಮಹಾಮಾತೆ. ಎಲೆಮರೆಯ ಕಾಯಿಯಂತೆ ದುಡಿದು ಬದುಕ ಬವಣೆಗಳ ಉರಿಯಲ್ಲಿ ಬೆಂದು ಇಳೆಗೆ ತಂಪೆರೆವ ವೃಕ್ಷಗಳ ಬೆಳೆಸಿದ ಭಾರತದ ವೃಕ್ಷಮಾತೆ ಪದ್ಮಶ್ರೀಯಾಗಿ ನಮ್ಮ ಆದರ್ಶವಾದ ತುಳಸಿಗೌಡರ ಬದುಕು ಸಾವಿನಲ್ಲು ಸಾಯದಂತಹದ್ದು. ಮರಣ ಹೊಂದಿಯೂ ಅಜರಾಮರವಾದ ಅಪೂರ್ವ ವ್ಯಕ್ತಿತ್ವವದು. ತನಗಾಗಿ ತನ್ನವರಿಗಾಗಿ ಎಂದೇ ದುಡಿವ ಲಕ್ಷೋಪಲಕ್ಷ ಮಾನವರ ನಡುವೆ ನಿಸ್ವಾರ್ಥದಿಂದ ನಿರ್ವ್ಯಾಜ ಪ್ರೇಮದಿಂದ ಕಾಡಿಗಾಗಿ ಪರಿಸರಕ್ಕಾಗಿ ತನ್ನಿಡೀ ಜೀವನ ಮುಡಿಪಿಟ್ಟ ತುಳಸಿಗೌಡರು ತುಳಸಿಯ ಗಿಡದಂತೆ ನಿತ್ಯ ಪೂಜ್ಯನೀಯವಾದವರು. ಈಗಿನ ಪೀಳಿಗೆಯವರಿಗೆ ಓದಿನ ಅರಿವಿನ ಅಧ್ಯಯನಕ್ಕೆ ಬದುಕಿನ ರೀತಿಗೆ ಮಾದರಿಯಾದವರು.

ಜೀವಮಾನ ಪೂರ್ತಿ ಅರಣ್ಯ ಇಲಾಖೆಯ ದಿನಗೂಲಿಯಾಗಿಯೇ ಜೀವನ ಸವೆಸಿ ಹಣ್ಣಾದ ಜೀವಕ್ಕೆ ತನ್ನ ಇಳಿ ವಯಸ್ಸಿನಲ್ಲಿ ಪರಿಸರ ರಕ್ಷಣೆ ಮತ್ತು ಪೋಷಣೆಯ ಅಸಾಮಾನ್ಯ ಸೇವೆಗಾಗಿ ಭಾರತದ ಅತ್ಯುನ್ನತ ಮೂರನೇ ನಾಗರೀಕ ಗೌರವ ಪುರಸ್ಕಾರ ಪದ್ಮಶ್ರೀ ಸನ್ಮಾನ ತುಳಸಿಗೌಡರಿಗೆ ಅದಾವುದೇ ಹಮ್ಮು ಬಿಮ್ಮುಗಳ ತರಲೇ ಇಲ್ಲ. ಪಶ್ಚಿಮ ಘಟ್ಟ ಸಾಲಿನ ಅರಣ್ಯದ ಗಿಡ ಮರ ಹೂ ಬಳ್ಳಿ ಪೊದೆಗಳ ಕುರಿತಂತೆ ವಿಶ್ವಕೋಶವೇ ಆಗಿದ್ದ ತುಳಸಿಗೌಡರು ದಿನಾಂಕ 16 ಡಿಸೆಂಬರ್ 2024 ರಂದು ವಯೋಸಹಜವಾಗಿ ಮರಣ ಹೊಂದಿ ಪ್ರಕೃತಿಯ ಪಂಚಭೂತಗಳಲ್ಲಿ ಲೀನವಾಗಿದ್ದಾರೆ. ಎಂಬತ್ತು ವರ್ಷಗಳ ಜೀವನದಲ್ಲಿ ಅರವತ್ತು ವರ್ಷಗಳ ಕಾಲ ಕಾಡಿನ ಮರಗಳ ಪೋಷಣೆಗೆ ಕಳೆದ ತುಳಸಿತಾಯಿ ವೃಕ್ಷಮಾತೆ ಮತ್ತೊಮ್ಮೆ ಕರುನಾಡಿನಲ್ಲಿ ವೃಕ್ಷಮಾತೆಯಾಗಿ ಹುಟ್ಟಿಬರಲಿ ಎಂದು ಪರಿಸರಪ್ರೇಮಿಗಳೆಲ್ಲರ ಮನದಾಳದ ಪ್ರಾರ್ಥನೆಯಾಗಿದೆ.



» **ಲೇಖನ**
**ಟಿ.ಪಿ.ಉಮೇಶ್**
**ಸಾಹಿತಿಗಳು,**
**ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರು**
**ಹೊಳಲ್ಕೆರೆ**
**9482665409**

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T